ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ



ಸಂಪುಟ 12 ಸಂಚಿಕೆ 25 ಜೂನ್ 24, 1990

ಕಲ್ಕತ್ತಾ ಮಹಾನಗರ ಪಾಲಿಕೆ ಚುನಾವಣೆಗಳಲ್ಲಿ

ಎಡರಂಗಕ್ಕೆ ಭಾರೀ ಗೆಲುವು

ಕಾಂಗೈಗೆ ದೊಡ್ಡ ಸೋಲು–ಬಿ.ಜೆ.ಪಿ.ಗೆ ಮತ್ತೆ ಮುಖಭಂಗ

ಜೂನ್ 17 ರಂದು ನಡೆದ ಕಲ್ಕತ್ತಾ ಮಹಾನಗರ ಪಾಲಿಕೆಯ ಚುನಾವಣೆಗಳಲ್ಲಿ ಎಡರಂಗ ಮೂರನೇ ಎರಡು ಬಹುಮತ ಪಡೆದು ಕಾಂಗ್ರೆಸ್(ಐ) ಗೆ ತೀವ್ರ ಪರಾಜಯ ಉಣ್ಣಿಸಿದೆ.

141 ಸದಸ್ಯ ಬಲವುಳ್ಳ ನಗರಪಾಲಿಕೆಯ 140 ಸ್ಥಾನಗಳ ಫಲಿತಾಂಶ ಪ್ರಕಟವಾಗಿದ್ದು ಇದರಲ್ಲಿ ಎಡರಂಗಕ್ಕೆ 99 ವಾರ್ಡುಗಳಲ್ಲಿ ಜಯ ಲಭಿಸಿದೆ. ಇದರಲ್ಲಿ 71 ಸ್ಥಾನಗಳು ಸಿ.ಪಿ.ಐ.(ಎಂ) ಗೆ ದೊರೆತಿವೆ. ಕಳೆದ ಬಾರಿ ಎಡರಂಗ ಪಡೆದಿದ್ದ ಸ್ಥಾನ 71.

1972ರ ದಾರಿ ಹಿಡಿಯಿರಿ(ಅಂದರೆ ಅರೆ–ಫ್ಯಾಸಿಸ್ಟ್ ದಾರಿ ಹಿಡಿಯಿರಿ) ಎಂದು ತನ್ನ ಬೆಂಬಲಿಗರಿಗೆ ಕರೆ ನೀಡಿದ ಎಮರ್ಜನ್ಸಿ ಕುಖ್ಯಾತಿಯ, ಪಂಜಾಬಿನ ರಾಜ್ಯಪಾಲನಾಗಿಯೂ ವಿಫಲಗೊಂಡ ಬ್ಯಾರಿಸ್ಟರ್ ಮಹಾಶಯ ಮಾಜಿ ಮುಖ್ಯಮಂತ್ರಿ ಸಿದ್ಧಾರ್ಥ ಶಂಕರ ರಾಯ್‌ರವರ ಪಥ್ಯ ಕಾಂಗೈನ ಕೆಟ್ಟಿದ್ದ ಆರೋಗ್ಯವನ್ನು ಮತ್ತಷ್ಟು ಕೆಡಿಸಿದೆ. ಕಳೆದ ಬಾರಿ. 66 ಸ್ಥಾನಗಳಿಸಲು ಸಾಧ್ಯವಾಗಿದ್ದ ಆ ಪಕ್ಷಕ್ಕೆ ಈ ಬಾರಿ ಸಿಕಿದ್ದು 37 ಸ್ಥಾನಗಳು. ಎಲ್ಲಾ ಸ್ಥಾನಗಳಿಗೂ ಅದು ಸ್ಪರ್ಧಿಸಿತ್ತು. ಬಿ.ಜೆ.ಪಿ. ಯ ಪ್ರತ್ಯಕ್ಷ, ಪರೋಕ್ಷ ಬೆಂಬಲ ದೊರೆತರೂ ಸಿಗಲಿಲ್ಲ.

ನವೆಂಬರ್ ಚುನಾವಣೆಗಳಲ್ಲಿ ಮತ್ತು ನಂತರ ನಡೆದ ವಿಧಾನಸಭಾ ಚುನಾವಣೆಗಳಲ್ಲಿ ಎಡ, ಜಾತ್ಯಾತೀತ ಪಕ್ಷಗಳು ದುರ್ಬಲವಾಗಿದ್ದಲ್ಲಿ ಕಾಂಗ್ರೆಸ್ (ಐ) ವಿರೋಧಿ ಅಭಿಪ್ರಾಯ ಕ್ರೋಢೀಕರಿಸಿ ಗೆಲ್ಲಲು ಸಾಧ್ಯವಾದ ಬಿ.ಜೆ.ಪಿ. ಇನ್ನು ದಿಲ್ಲಿ ತನ್ನದೇ, ಕಲ್ಕತ್ತಾ ವಶಪಡಿಸಿಕೊಳ್ಳೋಣ ಎಂದು ಹಾರಾಡಿತ್ತು. ಕಲ್ಕತ್ತೆಯಲ್ಲಿ ಅದರ ರ್‍ಯಾಲಿ ನೋಡಿ ಹಲವು ದೊಡ್ಡ ಪತ್ರಿಕೆಯವರೂ "ಕೆಂಪುಕೋಟೆ"ಗೆ ಬಿ.ಜೆ.ಪಿ. ಲಗ್ಗೆ ಹಾಕಲಾರಂಭಿಸಿದೆ. ಎಂದು ಭಾವಿಸಿದರು. ಆದರೆ ಕೆಲವು ದಿನಗಳ ಹಿಂದೆ ನಡೆದ ಪುರಸಭಾ ಚುನಾವಣೆಗಳು ಅವರ ಆಸೆಯನ್ನು ಮಣ್ಣುಗೂಡಿಸಿದ್ದು ಕಲ್ಕತ್ತಾ ಮಹಾನಗರ ಪಾಲಿಕೆಯ ಫಲಿತಾಂಶ ಅದನ್ನು ಸಮಾಧಿ ಮಾಡಿದೆ. ಹಲವೆಡೆ ಕಾಂಗ್ರೆಸ್ (ಐ)ಗೆ ಬೆಂಬಲ ನೀಡಿ, ಪ್ರತಿಯಾಗಿ ಅದರ ಬೆಂಬಲ ಪಡೆದಾದರೂ ಕೆಲವು ಸೀಟು ಗಿಟ್ಟಿಸಿಕೊಳ್ಳುವ ಅದರ ಆಸೆ ಫಲಿಸಿಲ್ಲ. 119 ಸ್ಥಾನಗಳಿಗೆ ಸ್ಪರ್ಧಿಸಿ ಎರಡು ಸ್ಥಾನ ಪಡೆದಿದೆ.

ಕಲ್ಕತ್ತಾ ಮಹಾನಗರ ಪಾಲಿಕೆ

ಚುನಾವಣಾ ಫಲಿತಾಂಶ

ಒಟ್ಟು ಸ್ಥಾನಗಳು – 141
ಪ್ರಕಟವಾಗಿರುವ ಸ್ಥಾನಗಳು –140
ಎಡರಂಗ–99
ಸಿ.ಪಿ.ಐ(ಎಂ) – 71
ಸಿ.ಪಿ.ಐ.–10
ಆರ್.ಎಸ್.ಪಿ. –8
ಫಾರ್ವರ್ಡ್ ಬ್ಲಾಕ್ –5
ಫಾರ್ವಡ್ ಬ್ಲಾಕ್(ಮಾರ್ಕ್ಸಿಸ್ಟ್)–1
ವಿಪ್ಲವಿ ಬಾಂಗ್ಲಾ ಕಾಂಗ್ರೆಸ್–1
ಬೆಂಬಲಿತ ಪಕ್ಷೇತರರು –3
ಕಾಂಗ್ರೆಸ್ (ಐ)...............37
ಬಿ.ಜೆ.ಪಿ..........................2
ಪಕ್ಷೇತರರು.......................2

ವೀರೇಂದ್ರ ಪಾಟೀಲರ ಸರಕಾರ ಮತ್ತು ಸರಕಾರಿ ನೌಕರರ ವರ್ಗಾವರ್ಗಿ

ಪ್ರತಿ ವರ್ಷ ಯಾವುದೇ ಸರಕಾರದಡಿಯಲ್ಲಿ ಸರಕಾರಿ ನೌಕರರು ಸ್ವಲ್ಪ ಮಟ್ಟಿಗೆ ವರ್ಗಾವರ್ಗಿಯಾಗುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಹಾಗೂ, ಕೆಲವು ವಿಶಿಷ್ಟ ಸಂದರ್ಭಗಳಲ್ಲಿ ವರ್ಷದ ನಡುವೆ ಕೂಡಾ ಕೆಲವು ಸರಕಾರಿ ನೌಕರರನ್ನು ವರ್ಗಾವರ್ಗಿ ಮಾಡುವುದೂ ಅವಶ್ಯಕವಾಗುತ್ತದೆ. ಅದರಲ್ಲಿಯೂ ವಿಶೇಷವೇನೂ ಇಲ್ಲ. ಒಂದು ಹೊಸ ಸರಕಾರ ಬಂದಾಗ ಸರಕಾರಿ ನೌಕರರು ಹಾಗೂ ವಿಶೇಷವಾಗಿ ಅಧಿಕಾರಿಗಳನ್ನು ವರ್ಗಾವರ್ಗಿ ಮಾಡುವುದೂ ಕೂಡಾ ಸಹಜವೇ.


ಆದರೆ, ವೀರೇಂದ್ರಪಾಟೀಲರು ಮುಖ್ಯ ಮಂತ್ರಿಯಾಗಿ ಕಾಂಗ್ರೆಸ್(ಐ) ಪಕ್ಷವು 1989 ರ ನವೆಂಬರ್‌ನಲ್ಲಿ ಅಧಿಕಾರಕ್ಕೆ ಬಂಧ ನಂತರ ಕರ್ನಾಟಕ ರಾಜ್ಯದಲ್ಲಿ ಸತತವಾಗಿ ನಡೆಯುತ್ತಾ ಬಂದಿರುವ "ಸಾಮೂಹಿಕ ವರ್ಗಾವರ್ಗಿ" ಮಾತ್ರ ಎಲ್ಲರನ್ನೂ ದಂಗು ಬಡಿಸಿದೆ ಎಂದರೆ ಅತಿಶಯೋಕ್ತಿಯಲ್ಲ. ಈ ವರ್ಗಾವರ್ಗಿ ಎಷ್ಟು "ಸಾಮೂಹಿಕ"ವಾಗಿ ಬೆಳೆದು ಬಂದಿದೆ ಎಂದರೆ ಬೆಂಗಳೂರು ಒಂದು ಸರಕಾರಿ ನೌಕರರ ತಾತ್ಕಾಲಿಕ ಶಿಬಿರವಾಯಿತು: ಎಲ್ಲರ ಕಣ್ಣಿಗೆ ಕಾಣುವಂತೆ ಕೋಟಿ ಗಟ್ಟಲೆಯಲ್ಲಿ ಹಣ ಕೈ ಬದಲಾಯಿತು. ಕೆಲವು ಮಂತ್ರಿಗಳು ರಾತ್ರೋರಾತ್ರಿ ಕೋಟ್ಯಾಧೀಶ್ವರರಾದರು. ಇನ್ನೂ ಕೆಲವು ಎಂ. ಎಲ್. ಎ ಗಳಿಗೂ ಅದರಲ್ಲಿ ಭೀಮ ಪಾಲು ಸಿಕ್ಕಿತು......ಆದರೆ, ಜನರಲ್ಲಿ ಈ ಬಗ್ಗೆ ಉಂಟಾದ ಪ್ರತಿಕ್ರಿಯೆ –ಎಂತ ಭ್ರಷ್ಟ ಸರಕಾರವಪ್ಪ ಈ ವೀರೇಂದ್ರಪಾಟೀಲರ ಸರಕಾರ!– ಕೊನೆಗೆ ಕಾಂಗ್ರೆಸ್ ಎಂ.ಎಲ್.ಎ. ಗಳನ್ನು ತಟ್ಟಿ, ಅವರೆಲ್ಲರೂ ಇತ್ತೀಚೆಗೆ ವೀರೇಂದ್ರಪಾಟೀಲರನ್ನು, ಅವರ ಮಂತ್ರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಳ್ಳು [illegible]ಯಿತು. ಅಲ್ಲಿ ಒಂದು ತರದ ದಂಗೆ ಎದ್ದಿತು. ವಿಧಾನಸೌಧದಲ್ಲಿ ಬಹಿರಂಗವಾಗಿ "ಒಬ್ಬ ಮಂತ್ರಿ ಸಾರಾಸಗಟಾಗಿ ಸಾವಿರಾರು ಮಂದಿ ಸರಕಾರಿ ನೌಕರರನ್ನು ತನ್ನ ಡಿಪಾರ್ಟ್‌ಮೆಂಟಿನಲ್ಲಿ ವರ್ಗಾವರ್ಗಿಮಾಡಿ ಪುನಃ ಆ ನೌಕರರನ್ನು ಅವರ ಇಷ್ಟಕ್ಕೆ ಅನುಗುಣವಾಗಿ ವರ್ಗಾವರ್ಗಿ ಮಾಡಿ ಕೋಟಿಗಟ್ಟಲೆಯಲ್ಲಿ ಲಂಚ ಪಡೆದಿದ್ದಾರೆ ಎಂದು ವಿರೋಧ ಪಕ್ಷದಛಬ್ಬ ಶಾಸಕರು ಮಾಡಿದ ಆರೋಪಕ್ಕೆ ಕಾಂಗ್ರೆಸ್(ಐ) ಶಾಸಕರ ಸಭೆಯಲ್ಲಿ ಸ್ಪಷ್ಟವಾಗಿ "ಪ್ರತಿಧ್ವನಿ" ಎದ್ದಿತು.

ನಮ್ಮ ಪಕ್ಷದ ಅಭಿಪ್ರಾಯದಲ್ಲಿ ಇದೊಂದು ಸಾಮಾನ್ಯನಾದ ಘಟನೆಯಲ್ಲ ಇದೊಂದು ಕಾಂಗ್ರೆಸ್ (ಐ) ಪಕ್ಷದ ಆಡಳಿತೆಯ ವೈಖರಿಯ ದೃಷ್ಟಾಂತ. ಈ ವೈಖರಿಯ ಹಲವು ಮುಖಗಳಲ್ಲಿ ಇದೊಂದು. ಇದರ ಹಿನ್ನೆಲೆಯನ್ನು ಸೂಕ್ಷ್ಮವಾಗಿ ಪರಿಶೀಲಿಸುವುದು ರಾಜ್ಯದ ಶುದ್ಧ ಮತ್ತು ದಕ್ಷ ಆಡಳಿತೆಯ ದೃಷ್ಟಿಯಿಂದ, ನಿಷ್ಪಕ್ಷ ಆಡಳಿತೆಯ ದೃಷ್ಟಿಯಿಂದ ಅವಶ್ಯಕವಾಗಿದೆ.

ಒಂದು: ಕಾಂಗ್ರೆಸ್ (ಐ) ಪಕ್ಷವು ಸುಮಾರು 6 ವರ್ಷ ಕಾಲ ಅಧಿಕಾರದಿಂದ ಹೊರಗಾಗಿ ಅದು ಕರ್ನಾಟಕದಲ್ಲಿ 35 – 36 ವರ್ಷ ಕಾಲ ಅಧಿಕಾರದಲ್ಲಿ ಇತ್ತು ಎಂಬುದನ್ನು ಇಲ್ಲಿ ನೆನಪಿಸಬೇಕು) ಹೊರಗುಳಿದ ನಂತರ ಇದೀಗ ಅಧಿಕಾರಕ್ಕೆ ಬಂದ ಹಿನ್ನೆಲೆಯಲ್ಲಿ ಈ "ಸಾಮೂಹಿಕ ವರ್ಗಾವರ್ಗಿ" ಮತ್ತು ಕೋಟಿಗಟ್ಟಲೆ ಹಣದ ವಹಿವಾಟು ನಡೆಯುತ್ತಿದೆ ಎಂಬುದನ್ನು ಮನಗಾಣಬೇಕು.

ಎರಡು: ಕಾಂಗ್ರೆಸ್(ಐ) ಪಕ್ಷದ ಆಡಳಿತೆಯ "ಸಂಸ್ಕೃತಿ"ಯ ಒಂದು ಅಂಶ ಕಾಂಗ್ರೆಸ್

ಪುಟ 3 →



"ಮಾರ್ಕ್ಸ್‌ವಾದ ಇನ್ನಿಲ್ಲ. ಇ.ಎಂ.ಎಸ್. ನನ್ನ [illegible] ಕಾಂಗ್ರೆಸ್ಸಿಗೇ ಬಾಗಿಲು"
ಎಂದು ಎ.ಕೆ. ಆಂಟೋನಿ ಹೇಳಿಕೆ 'ಪಾಂಚಜನ್ಯ' ಪತ್ರಿಕೆಯಲ್ಲಿ ಪ್ರಕಟ

ಹೊಚೆಮಿನ್ ಜನ್ಮಶತಾಬ್ಧಿ
ಭಾರತದ ಪ್ರಜಾಪ್ರಭುತ್ವ ಆಂದೋಲನಕ್ಕೆ ಸ್ಫೂರ್ತಿ

ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧಾರವಾಡ ಜಿಲ್ಲಾ ಸಮಿತಿಯ ಆಶ್ರಯದಲ್ಲಿ 17-6-90 ರಂದುಸಂಜೆ ಸರಕಾರಿ ಭವನದಲ್ಲಿ ನಡೆದ ಹೊಚಿಮಿನ್ ಜನ್ಮ ಶತಾಬ್ಧಿಯ ಸಮಾರಂಭದಲ್ಲಿ ಮಾತನಾಡುತ್ತಾ, ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ. ವಿ.ಎನ್. ಹಳಕಟ್ಟಿ ಅವರು "ಹೊಚಿಮಿನ್‌ರ ಜನ್ಮ ಶತಾಬ್ಧಿ ಆಚರಣೆಯು ಭಾರತದ ಪ್ರಜಾಪ್ರಭುತ್ವ ಆಂದೋಲನಕ್ಕೆ ಸ್ಫೂರ್ತಿ ನೀಡಲಿದೆ" ಎಂದರು. ಅವರು ಮುಂದುವರಿದು, "ಯುಗಪುರುಷ ಲೆನಿನ್ ಅವರ "ರಾಷ್ಟ್ರೀಯತೆ ಮತ್ತು ವಸಾಹತುವಾದ" ಎಂಬ ಮಹಾನ್ ಸೈದ್ಧಾಂತಿಕ ಬರವಣಿಗೆಯಿಂದ ಹೊಚಿಮಿನ್ಹ್ ಅತ್ಯಂತ ಪ್ರಭಾವಿತರಾಗಿ, ವಿಯೆಟ್ನಾಂ ನಂತಹ ತೀರಾ ಸಣ್ಣ ಹಾಗು ಬಡ ರಾಷ್ಟ್ರದಲ್ಲೂ ಎಲ್ಲಾ ಜನವರ್ಗಗಳನ್ನು ರಾಷ್ಟ್ರ ಪ್ರೇಮದ ಆಧಾರದಲ್ಲಿ ಸಂಘಟಿಸಿ, ಫ್ರೆಂಚ್ ವಸಾಹತುಶಾಹಿ, ಜಪಾನಿ ಫ್ಯಾಸಿಸಂ, ಮತ್ತು ಅಮೆರಿಕದ ಸಾಮ್ರಾಜ್ಯಶಾಹಿ ಶಕ್ತಿಗಳ ವಿರುದ್ಧ ಮೂವತ್ತು ವರ್ಷಗಳ ದೀರ್ಘಕಾಲ (1945 - 1975) ವಿರೋಚಿತ ಹೋರಾಟ ನಡೆಸಿ, ಪೂರ್ಣ ಜನತಾ ಪ್ರಜಾಪ್ರಭುತ್ವ ಸ್ಥಾಪಿಸಿ, ಸಮಾಜವಾದಿ ಸಮಾಜ ಸ್ಥಾಪನೆಗೆ ಭದ್ರ ಬುನಾದಿ ಹಾಕಿದರು " ಎಂದು ತಿಳಿಯಪಡಿಸಿದರು. "ರಾಷ್ಟ್ರಪ್ರೇಮ ಮತ್ತು ಅಂತರಾಷ್ಟ್ರೀಯತೆಗಳೊಳಗಿನ ವೈರುಧ್ಯವಿಲ್ಲದೆ ಒಂದಕ್ಕೊಂದು ಪೂರಕವಾಗಿ ಹೊಸೆದುಕೊಂಡು ! ಈ ಶತಮಾನದಲ್ಲಿಯೇ ಅದ್ವಿತೀಯವಾದ ವಿಯಟ್ನಾಂ ಕ್ರಾಂತಿಯನ್ನು ಸಫಲಗೊಳಿಸಿ ಜಾಗತಿಕ ಕಮ್ಯುನಿಸ್ಟ್ ಆಂದೋಲನಕ್ಕೆ ಅಪೂರ್ವ ಕೊಡುಗೆ ನೀಡಿದರು ಎಂದು ಶ್ರೀ ಹಳಕಟ್ಟಿರವರು ವಿವರಿಸಿದರು. "ಗಾಂಧಿ, ನೆಹರು ಮುಂತಾದ ರಾಷ್ಟ್ರೀಯ ಬಂಡವಾಳಶಾಹಿಗಳ ನೇತೃತ್ವದಲ್ಲಿ ನಡೆದ ಭಾರತದ ಸ್ವಾತಂತ್ರ ಹೋರಾಟದ ಕಾಲದಲ್ಲಿ, ಸ್ವಾತಂತ್ರೋತ್ತರದಲ್ಲಿಯೂ ಬಂಡವಾಳಶಾಹಿ - ಭೂಮಾಲಕ ಪ್ರಭುತ್ವವನ್ನು ಕಿತ್ತೊಗೆದು ಜನತಾಪ್ರಭುತ್ವವನ್ನು ಸಾಧಿಸಲು ಸಾಧ್ಯವಾಗದೇ ಇದ್ದುದರಿಂದ, ಭಾರತದ ಪ್ರಜಾಪ್ರಭುತ್ವ ಕ್ರಾಂತಿಯನ್ನು ಪೂರ್ಣಗೊಳಿಸುವ ಜವಾಬ್ದಾರಿ ಹೊತ್ತಿದೆ. ಈ ದಿಸೆಯಲ್ಲಿ, ಹೊಚಿಮನ್ ಮತ್ತು ವಿಯಟ್ನಾಂನ ಕಮ್ಯುನಿಸ್ಟ್ ಪಕ್ಷದ ಸಾಧನೆಯು ಭಾರತಕ್ಕೆ ಅತ್ಯಂತ ಸ್ಫೂರ್ತಿ ನೀಡಲಿದೆ"ಎಂದರು.

ಸಮಾರಂಭದ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸ್ಥಳೀಯ ಕಾರ್ಮಿಕ ಧುರೀಣ ಸಾಹಿತಿ, ಪತ್ರಕರ್ತರಾದ ಪ್ರೊ.ಕೆ. ಎಸ್. ಶರ್ಮಾ ಅವರು ಮಾತನಾಡುತ್ತಾ, "ವಿಯಟ್ನಾಂನ ಹೊಚಿಮಿನ್ಹ್ ಭಾರತಕ್ಕೆ ತುಂಬಾ ಪ್ರಿಯರು, ಅವರ ಬದುಕು, ಹೋರಾಟ ಸಾಧನೆಗಳು ನಮ್ಮ ಜನರಿಗೆ ಬಹಳ ಅರ್ಥ ಅರ್ಥಪೂರ್ಣವಾಗಿದೆ; ಜಾತಿ - ಮತಗಳ ಭೇದ ಭಾವಗಳಿಂದ ಒಡೆದುಹೋಗುತ್ತಿರುವ ನಮ್ಮ ದೇಶ ಬಾಂದವರನ್ನು ರೈತ - ಕಾರ್ಮಿಕ ಸಖ್ಯತೆಯ ಆಧಾರದಲ್ಲಿ ಪುನರ್‌ಸಂಘಟಿಸಿ ಪ್ರಜಾಪ್ರಭುತ್ವ ಆಂದೋಲನಕ್ಕೆ ಅಣಿಗೊಳಿಸಲು ಹೊಚಿಮಿನ್ ಸ್ಫೂರ್ತಿಪುರುಷರು; ಪೂ.ಯುರೋಪಿನಲ್ಲಿ ಇತ್ತೀಚೆಗೆ ಸಮಾಜವಾದದ ಹಿನ್ನೆಡೆಯು ಸೈದ್ಧಾಂತಿಕ ವಿಫಲತೆಯಾಗಿರದೆ, ಪ್ರಯೋಗದ ವಿಫಲತೆಯಾಗಿದೆ ಎಂದರು. ಹೊಚಿಮಿನ್ಹ್‌ರ ಕುರಿತಾದ ಸಂಶೋಧನೆ, ಅಧ್ಯಯನ, ಪ್ರಯೋಗಗಳಿಂದ ನಮ್ಮ ಜನರಿಗೆ ಮಾರ್ಕ್ಸ್‌ವಾದ ಲೆನಿನ್‌ವಾದದಲ್ಲಿ ವಿಶ್ವಾಸ ಮೂಡಿಸಲು ಸಾಧ್ಯವಿದೆ" ಎಂದರು.

ಧಾರವಾಡದ ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರದ ಗೌರವ ನಿರ್ದೇಶಕರಾದ ಡಾ॥ ವಿ.ಎನ್. ದೇಶಪಾಂಡೆಯವರು ಹೊಚಿಮಿನ್‌ರ ಸೈದ್ಧಾಂತಿಕ ಸ್ಪಷ್ಟತೆ, ಧೀರೋದ್ಧಾತ ನಾಯಕತ್ವ ಸರಳತೆ, ಮಾನವೀಯತೆ, ಮಿತವ್ಯಯ ಮುಂತಾದ ಕಮ್ಯುನಿಸ್ಟ್ ನೀತಿಗಳ ಪರಿಪಾಲನೆ, ಇತ್ಯಾದಿ ವಿಷಯಗಳನ್ನು ವಿವರಿಸಿ, ಅವರ ಉಯಿಲಿನ ಮುಖ್ಯಾಂಶಗಳನ್ನು ವಿವರಿಸಿ, ಅವರ ಉಯಿಲಿನ ಮುಖ್ಯಾಂಶಗಳನ್ನು ತಿಳಿಸಿದರು. ಧಾರವಾಡ ವಿಭಾಗದ ಕಾರ್ಯಕರ್ತರಾದ ಶ್ರೀ.ಬಿ.ಎಸ್. ಸೊಪ್ಪಿನ ಮತ್ತು ಎಸ್.ಎಫ್.ಐ.ಯ ಶ್ರೀ ಸುರೇಶ ಹಾಂಡೇಲ ಅವರು ಈ ಸಮಾರಂಭದಲ್ಲಿ ಮಾತನಾಡಿದರು. ಕೆ.ಎಸ್.ಆರ್.ಟಿ.ಸಿ. ನೌಕರ ಸಂಘದ ಮುಂದಾಳುಗಳಾದ ಶ್ರೀ ಜಗದೀಶ ಮಂಗಳೂರುಮಠ ಅವರು ಹೊಚಿಮಿನ್‌ರವರು ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಸಾಲಿನಲ್ಲಿರುವ ಜಗತ್ತಿನ ಮಹಾಚೇತನ ಎಂದು ವರ್ಣಿಸಿ, ತನ್ನ ಇತ್ತೀಚಿಗಿನ ರಕ್ತದಾಖಲೆಗಳು, ಎಂಬ ಕವನ ಸಂಕಲದಿಂದ ಹೊಚೆಮಿನ್ ಕುರಿತಾದ ಹೃದಯಸ್ಪರ್ಶಿ ಕವನ ಒಂದನ್ನು ಓದಿ ಹೇಳಿದರು.

ಸಮಾರಂಭದ ಅಧ್ಯಕ್ಷತೆವಹಿಸಿದ್ದ, ಸ್ಥಳೀಯ ಸಮುದಾಯ ಘಟಕದ ಅಧ್ಯಕ್ಷರಾದ ಶ್ರೀ ಸಿ.ಆರ್. ಭಟ್‌ರು ಹೊಚಿಮಿನ್ ಅವರ ಬದುಕು, ಹೋರಾಟ, ಸಾಧನೆಗಳನ್ನು ಪರಿಚಯಿಸುತ್ತಾ ಅವರ ಉಯಿಲಿನಿಂದ ಮತ್ತು ಜೈಲಿನ ದಿನಚರಿಯಿಂದ ಆಯ್ದ ಮಾತುಗಳನ್ನು, ಕವನಗಳನ್ನು ಓದಿ ಹೇಳಿದರು. ಸಾಂಸ್ಕೃತಿಕ ಕಾರ್ಯಕರ್ತರಿಗೆ ಸಮಾಜಪರಿವರ್ತನೆಯ ಕೆಲಸದರಲ್ಲಿರುವ ಜವಾಬ್ದಾರಿಯನ್ನು ಹೊಚಿಮಿನ್ಹ್ ಅವರ ಕೃತಿಗಳಿಂದ ಉದಾಹರಿಸಿದರು. ಸಮುದಾಯದ ಶ್ರೀ ಶಶಿಕಾಂತ ಕುಲ್ಕರ್ಣಿಯವರು ಹೊಚಿಮಿನ್ ಅವರ ರೇಖಾ ಚಿತ್ರ ಮತ್ತು ಅವರ ಉಯಿಲಿನಿಂದ ಹಾಗು ಕವನಗಳಿಂದ ಆಯ್ದ ಅಂಶಗಳ ಬಿತ್ತಿ ಚಿತ್ರಗಳಿಂದ ಸಮಾರಂಭದ ಸಭಾಂಗಣವನ್ನು ಅಂದಗೊಳಿಸಿದರು.

ವಿಷದುಸಿರು ತಾಕದಿರಲಿ ತಿಳಿಕೊಳಕ್ಕೆ

ವಿಯಟ್ನಾಂ ದೇಶದ ಮೇಲೆಲ್ಲಾ ಯುದ್ಧದ ಕಾರ್ಮುಗಿಲು– ಅಮೆರಿಕನ್ ಸಾಮ್ರಾಜ್ಯಶಾಹಿಗಳು ಎಸೆದ ಭೀಕರ ಬಾಂಬುಗಳ ದಟ್ಟವಾದ ಕಪ್ಪು ಹೊಗೆ ಎಲ್ಲೆಲ್ಲೂ. ಒಮ್ಮಿಂದೊಮ್ಮೆಗೇ ಹೂಂಕರಿಸಿ ಹಾರಿ ಬರುತ್ತಿದ್ದ ಅಮೆರಿಕಾ ಯುದ್ಧ ವಿಮಾನಗಳು ಸಾವಿರ ಸಾವಿರ ಬಾಂಬ್‌ಗಳನ್ನೆಸೆದು. ಗುಂಡಿನ ಮಳೆ ಗರೆಯುತ್ತಿದ್ದವು. ಒಂದು ಪುಟ್ಟದೇಶ ವಿಯಟ್ನಾಂನ ದೊಡ್ಡ ಜನ ಅಷ್ಟೇನೂ ಆಧುನಿಕ ಶಸ್ತ್ರಗಳಿಲ್ಲದೇ ಸಾಮ್ರಾಜ್ಯಶಾಹಿಯನ್ನು ದಿಟ್ಟವಾಗಿ ಎದುರಿಸಿ ಮಣ್ಣುಮುಕ್ಕಿಸಿದರು. ಕೆಲವು ಜನರಂತೂ ಬರಿಗೈನಲ್ಲೇ ಅಮೆರಿಕಾದ ಹತ್ಯೆಗಾರರಿಗೆ ತಕ್ಕ ಪ್ರತ್ಯುತ್ತರ ನೀಡಿದರು. ಇದೊಂದು ಮಹಾನ್ ಜನತೆಯ ಸಮರ. ಈ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಒಟ್ಟೊಬ್ಬರದೂ ಒಂದೊಂದು ಪರಾಕ್ರಮ. ತ್ಯಾಗಗಳ ಉಬ್ಬರ. ಅಂತಹವುಗಳಲ್ಲೊಂದು ಘಟನೆ ಇಲ್ಲಿದೆ.

ಹಸಿರು – ಪರ್ವತಗಳಿಂದ ಬೀಗುತ್ತಿದ್ದ ಸುಂದರ ಪ್ರದೇಶ. -ಯುದ್ಧದ ಕುಲುಮೆಯಲ್ಲಿ ಕಮರಿ ಹೋಗಿ ಜರ್ಜರಿತಗೊಂಡಿದ್ದಿತು. ಬಾಂಬ್‌ಗಳ ಸ್ಫೋಟ ದಿಂದ ಭೂಮಿಯಲ್ಲಿ ಆಳವಾದ ಕುಳಿಗಳಾಗಿದ್ದವು. ನಿರ್ಮಲ ನೀರಿದ್ದ

ಇತಿಹಾಸದ ಪುಟಗಳಿಂದ

ಸರೋವರಗಳಿಗೆ ಅಮೆರಿಕಾದ ಯುದ್ಧ ವಿಮಾನಗಳಿಂದ ವಿಷವನ್ನು ಹಾಕತೊಡಗಿದರು. ಆ ಪ್ರದೇಶದಲ್ಲಿದ್ದ ಸುಮಾರು ಹತ್ತು ಕೊಳಗಳಿಗೂ ವಿಷ ಬೆರೆಸಿದ್ದರು. ಉಳಿದದ್ದು ಒಂದೇ ಒಂದು ಕೊಳ! ಇದಕ್ಕೂ ವಿಷ ಬೆರೆಸಿದರೆ ಕುಡಿಯಲು ನೀರಿಲ್ಲ. ವಿಯಟ್ನಾಂ ವೀರರ ಸಮರ ಇಲ್ಲಿ ಸ್ವಲ್ಪ ಮುಕ್ತಾದಂತೆಯೇ ಸರಿ!

ಇದು ಅಲ್ಲಿದ್ದ ಒಬ್ಬ ಮಹಿಳೆಗೆ ತಿಳಿಯಿತು. ಕೂಡಲೇ ಆ ಕೊಳದತ್ತ ಓಡಿದವಳೇ ಅದರಲ್ಲಿ ಧುಮುಕಿದಳು. ಮೇಲೆ ಆಕಾಶದಲ್ಲಿ ಹಾರಿಬಂತು ಅಮೆರಿಕಾದ ವಿಮಾನ. ವಿಷದ ಸಣ್ಣ ಚೀಲವೊಂದನ್ನು ಎಸೆದೇ ಬಿಟ್ಟರು. ನೀರಿಗೆ ಸೋಕಿದರೆ...ನೀರೆಲ್ಲಾ ವಿಷ! ಮೇಲಿಂದ ಬೀಳುತ್ತಿದ್ದ ವಿಷದ ಚೀಲ ಗಮನಿಸಿದ ಆ ಮಹಿಳೆ ತನ್ನ ಬಾಯಿ ತೆರೆದಳು. ವಿಷ ಬಾಯಿ ಸೇರಿತು. ವಿಷ ತುಂಬಿದ ಬಾಯಿಯಿಂದ ಈಜಿ ಕೊಳದ ದಡ ಸೇರಿ ಉಗುಳಿದಳು. ಕೆಳಗುರುಳಿದವಳೇ ಕೊನೆಯುಸಿರೆಳೆದಳು.

ಕೊಳದ ನೀರು ಉಳಿಯಿತು. ಆದರೆ ಆ ಮಹಿಳೆ ಉಳಿಯಲಿಲ್ಲ. ಆಕೆ ನಿಜವಾಗಿಯೂ ವಿಯಟ್ನಾಂ ವೀರ ನಾರಿಯಾಗಿದ್ದಳು. ತ್ಯಾಗದ ಪ್ರತೀಕ ಈ ಅನಾಮಧೇಯ ಮಹಿಳೆ.

-ಎಸ್. ವೈ. ಗುರುಶಾಂತ್



"ಸಮಾಜವಾದಿ ದೇಶದಲ್ಲಿನ ಬೆಳವಣಿಗೆಗಳು"

ಸಿ.ಪಿ.ಐ.(ಎಂ) ಕರ್ನಾಟಕ ರಾಜ್ಯ ಸಮಿತಿ ಪ್ರಕಟಿಸಿರುವ ಕೇಂದ್ರ ಸಮಿತಿಯ ಅಂಗೀಕರಿಸಿದ ಈ ರಾಜಕಿಯ - ಸೈದ್ಧಾಂತಿಕ ವಿಶ್ಲೇಷಣೆಯಲ್ಲಿ ಈ ಕೆಳಗಿನ ಪರಿಚ್ಛೇದಗಳು ಕಣ್ತಪ್ಪಿನಿಂದ ಮುದ್ರಣಗೊಂಡಿಲ್ಲ. ಪುಟ 8 ಹಾಗೂ 9 ರ ನಡುವೆ ಇದನ್ನು ಸೇರಿಸಿ ಓದಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇವೆ.

ಸಿಪಿಐ (ಎಂ) ಸ್ಥಾಪನೆ

ಭಾರತ ಕಮ್ಯುನಿಸ್ಟ್ ಚಳುವಳಿಯಲ್ಲಿ ಪರಿಷ್ಕರಣವಾದದ ವಿರುದ್ಧ ನಡೆದ ಹೋರಾಟವು 1964 ರಲ್ಲಿ ಸಿಪಿಐ (ಎಂ) ಸ್ಥಾಪನೆಯಲ್ಲಿ ಪರ್ಯವಸಾನವಾಯಿತು. ಮುಖ್ಯವಾಗಿ ಭಾರತದ ಕ್ರಾಂತಿಯ ಕಾರ್ಯವ್ಯೂಹ ಮತ್ತು ತಂತ್ರಗಳಲ್ಲಿ ಸಿಪಿಐ (ಎಂ) ಒಂದಾಗಿದ್ದಿತ್ತು. 1957 ಮತ್ತು 1960 ರ ದಸ್ತಾವೇಜುಗಳ ಕ್ರಾಂತಿಕಾರಿ ತಿಳುವಳಿಕೆಗೆ ಬದ್ಧತೆ ಸಿಪಿಐ (ಎಂ) ಕಾರ್ಯಕ್ರಮದಲ್ಲೇ ಅಡಕವಾಗಿದ್ದಿತು. ಪಕ್ಷದ ಕಾರ್ಯಕ್ರಮದ ಪ್ಯಾರಾ 118 ಹೀಗೆ ಹೇಳುತ್ತದೆ: "....*1960* ರ ನವೆಂಬರಿನಲ್ಲಿ ಮಾಸ್ಕೋದಲ್ಲಿಮಾರ್ಕ್ಸ್‌ವಾದಿ- ಲೆನಿನ್ ವಾದಿ ಪಕ್ಷಗಳ ಪ್ರತಿನಿಧಿಗಳ ಹೇಳಿಕೆಯನ್ನು, ಮತ್ತು ಪ್ರಸ್ತುತ ವಿಶ್ವಪರಿಸ್ಥಿತಿಯ ಕ್ರಾಂತಿ ವಿಶ್ಲೇಷಣೆಯನ್ನುಳ್ಳ ಅದಕ್ಕೆ ಹಿಂದಿನ *1957* ರ ಘೋಷಣೆಯನ್ನು ನಮ್ಮ ಪಕ್ಷವು ದೃಢವಾಗಿ ಎತ್ತಿಹಿಡಿಯುತ್ತದೆ. ಈ ಎರಡು ಮಹತ್ವದ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ದಸ್ತಾವೇಜುಗಳು ಪ್ರಪಂಚದಾದ್ಯಂತ ಎಲ್ಲಾ ಕಮ್ಯುನಿಸ್ಟರಿಗೆ ಕಾರ್ಮಿಕವರ್ಗ ಮತ್ತು ಎಲ್ಲಾ ಪ್ರಗತಿಪರ ಶಕ್ತಿಗಳಿಗೆ ಅಮೂಲ್ಯವಾದ ಮಾರ್ಗದರ್ಶನವನ್ನು ನೀಡುತ್ತಿವೆ. ಈ ಎರಡು ದಸ್ತಾವೇಜುಗಳಲ್ಲಿರುವ ಕ್ರಾಂತಿಕಾರಿ ತತ್ವಗಳನ್ನು ಭಾರತ ಕಮ್ಯುನಿಸ್ಟ್ ಪಕ್ಷವು ಎತ್ತಿಹಿಡಿಯುತ್ತಿದೆ. ಪರಿಷ್ಕರಣವಾದ ಮತ್ತು ಪಂಥವಾದದ ತಪ್ಪು ಹಾದಿಗಳ ಬಗ್ಗೆ ಎಚ್ಚರ ವಹಿಸಿಕೊಂಡು ಮಾರ್ಕ್ಸ್‌ವಾದ-ಲೆನಿನ್‌ವಾದದ ಪರಿಶುದ್ಧತೆಯನ್ನು ರಕ್ಷಿಸುತ್ತದೆ...""

ಪಕ್ಷದ ಮುಖಂಡತ್ವದ ಬಹುದೊಡ್ಡ ಭಾಗವು ಸಿಪಿಐ (ಎಂ) ರಚನೆಯಾದ ನಂತರ ಎರಡು ವರ್ಷಗಳ ಕಾಲ ಬಂಧನದಲ್ಲಿ ಜೈಲಿನಲ್ಲಿದ್ದುದರಿಂದ ಕೂಡಲೇ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿನ ಭಿನ್ನಾಭಿಪ್ರಾಯಗಳನ್ನು ಚರ್ಚೆಗೆ ತೆಗೆಧುಕೊಳ್ಳ ಲಾಗಲಿಲ್ಲ. ಅವರ ಬಿಡುಗಡೆಯ ನಂತರ ಪಕ್ಷದೊಳಗೆ ಆಮೂಲಾಗ್ರವಾದ ಚರ್ಚೆ ನಡೆಯಿತು. 1968 ರಲ್ಲಿ ಬರ್ದ್ವಾನ್ ಪ್ಲೀನಮ್‌ನಲ್ಲಿ ಈ ಪ್ರಶ್ನೆಗಳನ್ನು ಅಂತಿಮವಾಗಿ ನಿರ್ಧರಿಸಲಾಯಿತು. ಸಿಪಿಐ(ಎಂ) ರಚನೆ ಮಾಡಿದ ನಾವು ಅವಿಭಜಿತ ಪಕ್ಷದಲ್ಲಿ 1963 ರಲ್ಲಿ ಈ ಪ್ರಶ್ನೆಗಳ ಗಂಭೀರತೆಯನ್ನು ಮನಗಂಡು ಅವುಗಳ ಮೇಲೆ ಪಕ್ಷದೊಳಗೆ ಆಮೂಲಾಗ್ರವಾದ ಚರ್ಚೆಯಾಗಬೇಕು ಎಂದು ಪ್ರತಿಪಾದಿಸಿದೆವು ಎಂಬುದನ್ನು ಗಮನಿಸಬೇಕು. ಅಂದಿನ ಬಹುಮತದ ಮುಖಂಡತ್ವವು ಇದನ್ನ ತಿರಸ್ಕರಿಸಿದ್ದಿತು.

ಯುರೋ ಕಮ್ಯುನಿಸಂ:

ಎಪ್ಪತ್ತರ ದಶಕದ ಪ್ರಾರಂಭದಲ್ಲಿ ಇನ್ನೊಂದು ತಪ್ಪುದಾರಿ ತಲೆದೋರಿತು. ಅದು ಯುರೋ ಕಮ್ಯುನಿಸಂ. ಅನೇಕ ಐರೋಪ್ಯ ಕಮ್ಯುನಿಸ್ಟ್ ಪಕ್ಷಗಳು ಬಲಪರಿಷ್ಕರಣವಾದಿ ಕಣ್ಣೋಟದಿಂದ ಬಾಧಿಸಲ್ಪಟ್ಟವು. 1976 ರಲ್ಲಿ ಬರ್ಲಿನ್‌ನಲ್ಲಿ ನಡೆದ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಸಮ್ಮೇಳನದಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಬಹಿರಂಗವಾಗಿ ಪ್ರತಿಪಾದಿಸಿದರು. ಈ ಸಮ್ಮೇಳನವನ್ನು ಕುರಿತು ಸಿಪಿಐ(ಎಂ) ನ ಪೊಲಿಟ್ ಬ್ಯುರೋ ಒಂದು ಹೇಳಿಕೆಯನ್ನು ಅಂಗೀಕರಿಸಿತು. ಇದು ಕಾರ್ಮಿಕ ಅಂತರಾಷ್ಟ್ರೀಯತೆ, ಕಾರ್ಮಿಕ ವರ್ಗದ ಸರ್ವಾಧಿಕಾರ, ಸೋಷಿಯಲ್ ಡೆಮೋಕ್ರಸಿ, ಮತ್ತು ಸಮಾಜವಾದಕ್ಕೆ ಪರಿವರ್ತನೆಯಂತಹ ಮೂಲಭೂತ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿತು. ನಾವು ಮಾರ್ಕ್ಸ್‌ವಾದ ಲೆನಿನ್‌ವಾದಕ್ಕೆ ಬದ್ಧರಾಗಿರುವುದಾಗಿ ಪುನರುಚ್ಚರಿಸಿದೆವು.

ವಿಶಾಲ ಜನವಿಭಾಗಗಳನ್ನು ಕಮ್ಯುನಿಸ್ಟ್ ಪಕ್ಷಗಳ ಹಿಂದೆ ತರಲು ಇದು ಅಗತ್ಯ ಎಂದು ಯುರೋ ಕಮ್ಯುನಿಸ್ಟ್ ತಪ್ಪು ದಾರಿಯ ಪ್ರತಿಪಾದಕರು ಸಮರ್ಥಿಸಿದರು. ಆದರೆ, ಅದಕ್ಕೆ ತದ್ವಿರುದ್ಧವಾಗಿ ಈ ಪಕ್ಷಗಳಿಗಿದ್ದ ಚುನಾವಣಾ ಬೆಂಬಲ ಮತ್ತು ಪ್ರಭಾವವು ಇಳಿಮುಖವಾಯಿತು.

ತಿದ್ದುಪಡಿ ಇದಲ್ಲದೆ ಈ ಕೆಳಗಿನ ಪುಟಗಳಲ್ಲಿ ಅಪಾರ್ಥ ಕೊಡುವ ಮುದ್ರಣ ದೋಷಗಳು ಉಳಿದಿವೆ. ಅವನ್ನು ಸರಿಪಡಿಸಿಕೊಳ್ಳುವುದು.

ಪುಟ	ಸಾಲು	ತಪ್ಪು	ತಿದ್ದುಪಡಿ
3	11	ಮಾಡುವ	ಮಾನವ
28	15	ಭಾಗವಾಗೆ ದಿರುತ್ತದೆ	ಭಾಗವಾಗಿ ರುತ್ತದೆ
42	9	ಪ್ರಯತ್ನ ದಿಂದಲೇ	ಪ್ರಯತ್ನ ವಿಲ್ಲದೆ

ಪುಟ	ಸಾಲು	ತಪ್ಪು	ತಿದ್ದುಪಡಿ
26	16	ಸಮೂಹ ಮತ್ತು ಉತ್ಪಾದನೆಯ	ಮತ್ತು ಉತ್ಪಾದನೆಯ
34	19	ಪಟ್ಟಭದ್ರ ಬುನಾದಿಯ	ಭದ್ರ ಬುನಾದಿಯ
46	11-12	ವಿನಿಮಯ ಶೋಷಣೆ ನಡೆಯುವುದರಲ್ಲಿ ಅಲ್ಲ	ವಿನಿಮಯ ನಡೆಯುವುದರಲ್ಲಿ ಅಲ್ಲ
45	ಬಾಕ್ಸ್	- ,, -	- ,, -

ಪುಟ 1 ರಿಂದ

ವೀರೇಂದ್ರ ಪಾಟೀಲರ ಸರಕಾರ ಮತ್ತು ಸರಕಾರಿ ನೌಕರರ ವರ್ಗಾವರ್ಗಿ

ಶಾಸಕರು ಮತ್ತು ಮಂತ್ರಿಗಳು ತಾವು ಅಧಿಕಾರದಲ್ಲಿರುವ ಕಾಲದಲ್ಲಿ ಸಾಧ್ಯವಾದಷ್ಟು ಬೇಗ ಶ್ರೀಮಂತರಾಗಲು ಪ್ರಯತ್ನಿಸುವದು ರೂಢಿಯಾಗಿ ಬಂದಿದೆ. ಇದನ್ನು ತಿಳಿದವರು "ಬಂಡವಾಳವಿಲ್ಲದೆ ಬಂಡವಾಳಶಾಹಿ'' ಯಾಗುವುದು ಎಂದು ತಮಾಷೆ ಮಾಡುತ್ತಾರೆ. ಇದು ಯಥಾರ್ಥ. ಕೇಂದ್ರದಲ್ಲಿ ಕಾಂಗ್ರೆಸ್(ಐ) ಪಕ್ಷ ಅಧಿಕಾರದಲ್ಲಿರುವಷ್ಟು ಕಾಲ ಹಾಗು ರಾಜ್ಯಗಳಲ್ಲಿ ಅಧಿಕಾರದಲ್ಲಿದ್ದಾಗ ಅನುಸರಿಸುತ್ತಾ ಬಂದ ರೂಢಿ,ನೀತಿ, ವೈಖರಿ ಇದಾಗಿದೆ. ಇದಕ್ಕೆ ಎಷ್ಟು ಬೇಕಾದರೂ ನಿರ್ಧಿಷ್ಟ ಉದಾಹರಣೆಗಳನ್ನು ಕೊಡಬಹುದು. ಕರ್ನಾಟಕ ಹಲವಾರು ಮಂದಿ ಕಾಂಗ್ರೆಸ್(ಐ) ಶಾಸಕರ ಮತ್ತು ಮಂತ್ರಿಗಳ ಶಾಸಕರ ಮತ್ತು ಮಂತ್ರಿಗಳ "ಶಾಸಕ ಪೂರ್ವ'' ಮತ್ತು "ಮಂತ್ರಿಪೂರ್ವ'' ಆದಾಯಗಳನ್ನು ತುಲನೆ ಮಾಡಿದರೆ ಇದು ವ್ಯಕ್ತವಾಗುವುದು. ಸತತವಾಗಿ ಎಷ್ಟೋ ಸರ್ತಿ ಶಾಸಕರು ಮತ್ತು ಮಂತ್ರಿಗಳು ತಮ್ಮ ಆದಾಯಗಳನ್ನು ಬಹಿರಂಗ ಪಡಿಸಿಕೊಳ್ಳಬೇಕು ಎಂದು ಸಾರ್ವಜನಿಕರು ಮಾತ್ರವಲ್ಲ ಕಾಂಗ್ರೆಸ್(ಐ) ಪಕ್ಷವೇ ತೀರ್ಮಾನಿಸಿ ಬಹಿರಂಗ ಹೇಳಿಕೆ ಕೊಟ್ಟರೂ, ಕಾರ್ಯತಃ ಆ ನಿರ್ದೇಶನ ಎಲ್ಲಿಯೂ ಜಾರಿಯಾಗಲಿಲ್ಲ. ಇತ್ತೀಚೆಗೆ ಬಿಜು ಪಾಟ್ನಾಯಿಕರು ಒರಿಸ್ಸಾದಲ್ಲಿ ಹಿಂದಿನ ಕಾಂಗ್ರೆಸ್(ಐ) ಮಂತ್ರಿಗಳ ಮನೆಗಳನ್ನು ಜಪ್ತಿ ಮಾಡಿದಾಗ ದೊರೆತ "ದ್ರವ್ಯ ಸಂಚಯದ ಚಿತ್ರ" ಎಲ್ಲರನ್ನು ದಂಗುಪಡಿಸಿದ್ದು ಒಂದು ಉದಾಹರಣೆ. ಒಬ್ಬ ಸಾದಾ ವಕೀಲರಾಗಿದ್ದ ಕಾಂಗ್ರೆಸ್(ಐ) ಪುಢಾರಿ ಇದೀಗ ಲಕ್ಷಗಟ್ಟಲೆಯಲ್ಲಿ ವ್ಯವಹಾರ ಹಾಗೂ ಬಂಗಲೆ ಇತ್ಯಾದಿಗಳ ಒಡೆಯನಾಗಿರುವುದು ಕರ್ನಾಟಕದ ಒಂದು ಉದಾಹರಣೆ.

ಮೂರು:ಕಾಂಗ್ರೆಸ್(ಐ) ಪಕ್ಷದ ಆಡಳಿತೆಯ ವೈಖರಿ– ಕಾಂಗೆಸ್(ಐ) ಶಾಸಕರಿಗೆ "ಬೇಕು ಬೇಕಾದ ಪ್ರಮುಖ ಅಧಿಕಾರಿಗಳನ್ನು ತಮ್ಮ ಕ್ಷೇತ್ರದಲ್ಲಿ ನೇಮಕ ಮಾಡುವುದು ನೇಮಕ ಮಾಡುವುದು''ಆಗಿದೆ. ಕಾರಣ; ಹಾಗೆ ಮಾಡುವುದರಿಂದ ಅಧಿಕಾಂಶ ಭೂಮಾಲೀಕರಾಗಿರುವ ಈ ಮಂತ್ರಿಗಳು, ಗೂಂಡಾ ಜನರಿಂದ ಕೂಡಿಕೊಂಡು ಮೆರೆಯುತ್ತಿರುವ ಈ ಮಂತ್ರಿ ಗಳು, ಎಲ್ಲಿಯಾದರೂ ಸಾರ್ವಜನಿಕ ಪ್ರತಿಭಟನೆಗೆ ಒಳಗಾಗಿ ಸಿಕ್ಕಿ ಬೀಳುವ ಸಂಧರ್ಭದಲ್ಲಿ ಈ ಅಧಿಕಾರಿಗಳು ಅವರ ರಕ್ಷಣೆಗೆ ಬರಬೇಕು ಎಂಬುದು ಒಂದು ಉದ್ದೇಶವಾದರೆ, ಅಧಿಕಾರಿಗಳ ಜೊತೆ ಸೇರಿ ತಾವೂ ಸರಕಾರಿ ಖಜಾನೆ ಲೂಟಿ ಮಾಡುವುದು ಇನ್ನೊಂದು ಉದ್ದಿಶ್ಯವಾಗಿದೆ. ಹರಿಜನರ ಹೆಸರಿನಲ್ಲಿ ಗಿರಿಜನರ ಹೆಸರಿನಲ್ಲಿ,ಸರಕಾರಿ ಕಾಮಗಾರಿ ಹೆಸರಿನಲ್ಲಿ, ಬಡವರಿಗೆ ಮನೆ ಎಂಬ ಹೆಸರಿನಲ್ಲಿ ಕೋಟಿಗಟ್ಟಲೆ ಹಣ ವ್ಯಯವಾದರೂ ಆ ವಿಭಾಗಗಳಿಗೆ ಅದು ತಲುಪುವುದಿಲ್ಲವೆಂಬುದು ಸರ್ವವಿದಿತವಾದ ಸಂಗತಿ. ಕಾಂಗ್ರೆಸ್ (ಐ) ಪಕ್ಷವೇ ದೀರ್ಘಕಾಲ ಆಡಳಿತ ಮಾಡಿ ಬಹಿರಂಗವಾಗಿ ಒಪ್ಪಿಕೊಂಡಿರುವ ದೋಷ. ಮಧ್ಯದಲ್ಲಿ ಈ ಹಣದ ಒಂದು ಗಣನೀಯ ಭಾಗ "ಮಧ್ಯವರ್ತಿಗಳಿಗೆ ಸೇರುವುದೇ" ಇದಕ್ಕೆ ಕಾರಣವಲ್ಲವೇ? ಈ ಮಧ್ಯವರ್ತಿಗಳು......... ಇವರೇ...........

ನಾಲ್ಕು: ನಮ್ಮ ರಾಜ್ಯದಲ್ಲಿ ಹಲವಾರು ಯೋಜನೆಗಳು ಮುಖ್ಯವಾಗಿ ನೀರಾವರಿ ಯೋಜನೆಗಳು "ಕಾಲ ಮಿತಿ'' ಯೊಳಗಡೆ ಜಾರಿಗೆ ಬಾರದೆ ನಿರ್ಧರಿಸಿದ ಹಣದ ಮೊಬಲಗು ಹತ್ತು ಪಟ್ಟನಷ್ಟು ಹೆಚ್ಚಾದುದು ಎಲ್ಲರಿಗೂ ತಿಳಿದ ವಿಷಯವಷ್ಟೇ. ಇತ್ತೀಚೆಗೆ ಕೃಷ್ಣಾ ನದಿಯ ಯೋಜನೆಯ ಕುರಿತು ಒಬ್ಬ ಕಾಂಗ್ರೆಸ್(ಐ) ಮಂತ್ರಿಯೇ ಈ ರೀತಿ ಹೇಳಿದ್ದಾರೆ "ಅಧಿಕಾಂಶ ಎಂಜಿನೀಯರುಗಳು ಮತ್ತು ಅಸಿಸ್ಟೆಂಟ್ ಇಂಜಿನಿಯರುಗಳು ವರ್ಗಾವರ್ಗಿಯಾದವರು ಈ ಯೋಜನೆಯ ಸ್ಥಾನಗಳಲ್ಲಿ ವರ್ಷಾನುಗಟ್ಟಲೆ ಬಂದು ಕೆಲಸ ಮಾಡಲೇ ಇಲ್ಲ. ಯೋಜನೆ ವಿಳಂಬವಾಗುವುದಕ್ಕೆ ಇದೂ ಒಂದು ಕಾರಣ''. ಅಂದರೆ, ಕಾಂಗ್ರೆಸ್(ಐ) ಸರಕಾರದ ವರ್ಗಾವರ್ಗಿಯಿಂದಾಗಿ "ಸರಕಾರದ ಆಡಳಿತ" ಸುಧಾರಿಸುವುದರ ಬದಲು ಅದು ಶಿಥಿಲವಾಗಿದೆ. ಮತ್ತು ಸರಕಾರಕ್ಕೆ ಬಹಳಷ್ಟು "ಪುಕ್ಕಟೆ ಸಂಬಳ, ತುಟ್ಟಿಭತ್ತೆ, ಪ್ರಯಾಣ ಭತ್ತೆ", ಹೆಸರಿನಲ್ಲಿ ಹಣವು ಪೋಲು ಆಗುತ್ತಾ ಬಂದಿದೆ.

ಐದನೆಯದು, ಕಾಂಗ್ರೆಸ್(ಐ) ಪಕ್ಷಕ್ಕೆ ಸರಕಾರಿ ನೌಕರರ ಬಗ್ಗೆ ಇರುವ ತಾತ್ಸಾರವೇ ಒಂದು ಕಾರಣ. ಸರಕಾರಿ ನೌಕರರ ಕುರಿತು ವೀರೇಂದ್ರ ಪಾಟೀಲರಿಂದ ಹಿಡಿದು ಹಲವಾರು ಮಂತ್ರಿಗಳು ಇತ್ತೀಚೆಗೆ ಒದರಿದ ಮಾತಿನ ಮುತ್ತುಗಳೇ ಇದಕ್ಕೆ ಸಾಕ್ಷಿ. ಇದೀಗ 15 ವರ್ಷ ಸರ್ವೀಸು ಮಾಡಿದ ಸರಕಾರಿ ನೌಕರರಿಗೆ "ನಿವೃತ್ತಿಯಾಗಲು ಅವಕಾಶ ಕೊಡುತ್ತಿದೆಯಂತೆ ಈ ಸರಕಾರ! ಅಂದರೆ, ಸರಕಾರಿ ನೌಕರರನ್ನು ಹಮಗೆ ಕಂಡಾಗ ಕೆಲಸದಿಂದ ನಿವೃತ್ತಿ ಪಡಿಸಲು ಸುಲಭ ಅವಕಾಶವನ್ನು ಈ ಸರಕಾರವು ಮಾಡಿಕೊಳ್ಳುವುದೇ ಈ ಸೂತ್ರದ ಹಿನ್ನೆಲೆಯಲ್ಲದೆ ಬೇರೇನು?

[illegible] ...ಪ್ರಾಮಾಣಿಕತೆಯಿಂದ ಮಾಡುತ್ತಿರಬೇಕು. ಸರಿಯಾದ ಸಾರ್ವಜನಿಕ ವಾತಾವರಣವನ್ನು ನಿರ್ಮಿಸಿ ಮಾಡಬೇಕು.

ಕಾಂಗ್ರೆಯೊಂದಿಗೆ ಬಿಜೆಪಿ

ಅಧಿಕಾರ ದಾಹ ಬಿಜೆಪಿ ಯನ್ನು ಯಾವ ರೀತಿ ಕಾಡುತ್ತಿದೆ ಎನ್ನಲು ಉಳ್ಳಾಲ ಮಂಡಲ ಉಪ ಪ್ರಧಾನ ಚುನಾವಣೆಯ ಒಂದು ಸಣ್ಣ ಉದಾಹರಣೆ ಸಾಕು. ಲಂಚ ಭ್ರಷ್ಟಾಚಾರದ ಪ್ರತಿಮೂರ್ತಿ ಕಾಂಗ್ರೆಸ ಪ್ರಧಾನ, ಉಪ ಪ್ರಧಾನರ ವಿರುದ್ಧ ಸಿ.ಪಿ.ಐಂ, ಜನತಾದಳ ನೇತೃತ್ವದಲ್ಲಿ ವಿರೋಧ ಪಕ್ಷಗಳು ಅವಿಶ್ವಾಸ ಮಂಡಿಸಿದ್ದವು. ಇದು ಯಶಸ್ವಿಯಾಗಿ ಮೂರನೇ ಎರಡು ಬಹುಮತದಿಂದ ಅಂಗೀಕರಿಸಲ್ಪಟ್ಟು ಪ್ರಧಾನ ಉಪ ಪ್ರಧಾನರುಸ್ಥಾನದಿಂದ ಭ್ರಷ್ಟರಾದರು. ಈ ಅವಿಶ್ವಾಸವನ್ನು ಬೆಂಬಲಿಸಿ ಬಿಜೆಪಿಗೆ ಅಧಿಕಾರದ ತೆವಲು ಕಾಣಿಸಿಕೊಂಡಿತು. ಉಪ ಪ್ರಧಾನ ಸ್ಥಾನ ಕೊಡಬೇಕೆಂದು ಗೋಗರೆಯಲಾರಂಭಿಸಿತು. ಮಂಡಲ ಮಟ್ಟದಲ್ಲಿ ಕೂಡಾ ಬಿಜೆಪಿ ಯೊಂದಿಗೆ ಅಧಿಕಾರ ಹಂಚಿಕೊಳ್ಳುವುದಾಗಲೀ, ಸಖ್ಯತೆಯಾಗಲೀ ಇಲ್ಲವೇ ಇಲ್ಲ ಎಂದು ಪಕ್ಷದ ಉಳ್ಳಾಲ ಪ್ರದೇಶ ಸಮಿತಿ ಸ್ಪಷ್ಟಪಡಿಸಿತು. ಆಗ ಬಿಜೆಪಿಯ ಕಾಂಗ್ರೆ ವಿರೋಧದ ನಿಜ ಬಣ್ಣ ಬಯಲಾಯಿತು. ತಾನು ಅವಿಶ್ವಾಸ ವ್ಯಕ್ತಪಡಿಸಿದ ಮಾಜಿ ಪ್ರಧಾನ, ಉಪ ಪ್ರಧಾನರೂ ಒಳಗೊಂಡಂತೆ ಕಾಂಗ್ರೆಯೊಂದಿಗೆ ಸೇರಿ, ಕೆಲವು ಸದಸ್ಯರನ್ನು ಬೆದರಿಸಿ ಪಕ್ಷಾಂತರಗೊಳಿಸಿ, ಕೆಲವರನ್ನು ಅಪಹರಿಸಿ ಉಪ ಪ್ರಧಾನಾ ಸ್ಥಾವ ವಶಪಡಿಸಿಕೊಂಡಿತು, ಈ ಕೂಟದ ವಿರುದ್ಧ ಸ್ಪರ್ಧಿಸಿದ ಬಂಡುಕೋರ ಕಾಂಗ್ರೆ ಅಭ್ಯರ್ಥಿ ಶ್ರೀಮತಿ ಕಲಾವತಿಯವರನ್ನು ಸಿ.ಪಿ.ಎಂ, ಜನತಾದಳ ಬೆಂಬಲಿಸಿತ್ತು. ಈಗ ಬಿಜೆಪಿಯ ಕಾಂಗ್ರೆ ವಿರೋಧ ಕೇವಲ ತಮಾಷೆಯಾಗಿದೆ.

ಅನಕ್ಷರಸ್ಥರಿಗೆ ಅಕ್ಷರ ಕಲಿಸಿ : ಪಿ.ಆರ್ .ರಾವ್ ಕರೆ.

ವ್ಯಾಯಾಮ ಶಾಲೆಗಳು ಕೇವಲ ಅಂಗ ಸಾಧನೆಗಳಿಗೆ ಮಾತ್ರ ಸೀಮಿತಗೊಳ್ಳದೆ ಗ್ರಾಮದ ಅವಿದ್ಯಾವಂತ ಜನರಿಗೆ ಅಕ್ಷರಾ ಭ್ಯಾಸ ಮಾಡುವ ಮೂಲಕ ಅವರಲ್ಲಿ ವೈಚಾರಿಕತೆಯನ್ನು ಬೆಳೆಸುವಂಥ ಸಂಸ್ಥೆಯಾಗಿ ಬೆಳೆದು ಬರಬೇಕಾಗಿದೆ. ಜನರಲ್ಲಿ ತುಂಬಿರುವ ಅಜ್ಞಾನ ಮೂಢನಂಬಿಕೆಗಳನ್ನು ಹೋಗಲಾಡಿಸಲು ಅವರಿಗೆ ತಿಳುವಳಿಕೆ ನೀಡುವುದು ಬಹಳ ಅಗತ್ಯವಿದೆ.

ವ್ಯಾಯಾಮ ಶಾಲೆ, ಸಂಘ ಸಂಸ್ಥೆಗಳ ವಿದ್ಯಾವಂತ ಯುವಕ–ಯುವತಿಯರು ಅವಿದ್ಯಾವಂತರಿಗೆ ಅಕ್ಷರಾಭ್ಯಾಸ ಮಾಡಿಸುವ ಹೊಣೆಯನ್ನು ಹೊರಬೇಕಾಗಿದೆಯೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ। ಪಿ.ರಾಮಚಂದ್ರರಾವ್ ರವರು ಕರೆ ನೀಡಿದರು.

ಜೂನ್ 10ರಂದು ಮಂಗಳೂರು ತಾಲೂಕಿನ ಪಿಲಾರ್‌ದಾರಂದಬಾಗಿಲು ಎಂಬಲ್ಲಿ ಶ್ರೀ ಬಾಲಾಂಜನೇಯ ವ್ಯಾಯಾಮ ಶಾಲೆಯ ನೂತನಕಟ್ಟಡದ ಶಿಲಾನ್ಯಾಸ ಮಾಡುತ್ತಾ ಮಾತನಾಡಿದ ಅವರು ಸಮಾಜದ ಪರಿವರ್ತನೆ ಪ್ರಕ್ರಿಯೆಯಲ್ಲಿ ಇಂತಹ ಸಂಘ ಸಂಸ್ಥೆಗಳ ಪಾತ್ರವೂ ಮಹತ್ವದ್ದಾಗಿದೆಯೆಂದು ಹೇಳಿದರು.

ಶಿಲಾನ್ಯಾಸ ಸಮಾರಂಭದ ಅಧ್ಯಕ್ಷತೆಯನ್ನು ಸೋಮೇಶ್ವರ ಮಂಡಲದ ಉಪ ಪ್ರಧಾನರಾದ ಶ್ರೀ. ಪಿ. ಪರಮೇಶ್ವರಶೆಟ್ಟಿಯವರು ವಹಿಸಿದ್ದರು.

ಸಮಾರಂಭದಲ್ಲಿ ಕಾರ್ಮಿಕ ಮುಂದಾಳು ಶ್ರೀ. ಯು. ಜನಾರ್ಧನನಾಯಕ್, ತೊಕ್ಕೊಟು ಶ್ರೀ ಜ್ಯವೀರ ಮಾರುತಿ ವ್ಯಾಯಾಮ ಶಾಲೆಯ ತರಬೇತುದಾರರೂ ಆಗಿರುವ ಉಳ್ಳಾಲ ಮಂಡಲ ಪಂಚಾಯತ್ ಸದಸ್ಯ ಶ್ರೀ.ಟಿ. ರಾಜೀವಮೆಂಡನ್ ರವರು ಮಾತನಾಡಿದರು. ಬೀಡಿ ಕಾರ್ಮಿಕರ ಮುಂದಾಳು ಶ್ರೀ. ಯು.ಬಿ. ಲೋಕಯ್ಯ, ಸುಕುಮಾರ್, ಪದ್ಮನಾಭಪಿಲಾರ್, ಸೋಮೇಶ್ವರ ಮಂಡಲ ಸದಸ್ಯ ಶ್ರೀ. ಪರ್ಯತ್ತೂರು ತನಿಯಪ್ಪ, ಪೆರ್ಮನ್ನೂರು ಮಂಡಲ ಸದಸ್ಯ ಶ್ರೀ.ಕೆ. ಕೃಷ್ಣಪ್ಪನವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಆರಂಭದಲ್ಲಿ ಶ್ರೀ. ಬಿ. ಉಮಾನಾಥ್ ರವರು ಸ್ವಾಗತಿಸಿ ಬಾಬು ಪಿಲಾರ್‌ರವರು ವಂದನಾರ್ಪಣಮಾಡಿದರು.

ಬೀಡಿ ಕೆಲಸಗಾರರ ಮಕ್ಕಳಿಗೆ ಪುಸ್ತಕ ವಿತರಣೆ

ಪುಸ್ತಕ ವಿತರಣೆಯನ್ನು ಸಂಘದ ಅಧ್ಯಕ್ಷ ಸಿ. ನಾರಾಯಣರು ಉದ್ಘಾಟಿಸುತ್ತಾ ನಮ್ಮ ದೇಶದಲ್ಲಿ ಸ್ವಾತಂತ್ರ ಸಿಕ್ಕಿ 43 ವರ್ಷ ದಾಟಿದರೂ ಇನ್ನು ಅವಿದ್ಯಾವಂತರ ಸಂಖ್ಯೆ ನೂರರಲ್ಲಿ ಎಪ್ಪತ್ತೈದರಷ್ಟು ಇರುವುದು ತುಂಬಾ ವಿಷಾದಕರ ಸಂಗತಿ. ಯಾವುದೇ ದೇಶದಲ್ಲಿ ಆ ದೇಶದ ಪ್ರಜೆಗಳನ್ನು ಮೊತ್ತ ಮೊದಲು ವಿದ್ಯಾವಂತರನ್ನಾಗಿ ಮಾಡುವ ಜವಾಬ್ದಾರಿ ಆ ದೇಶದ ಸರಕಾರದ್ದಾಗಿದೆ. ಆದರೆ ನಮ್ಮನ್ನು ಆಳಿಕೊಂಡು ಬಂದ ಸರಕಾರ ಈ ಕೆಲಸವನ್ನು ಮಾಡುವ ಬದಲು ಅವಿದ್ಯಾವಂತರಿಂದ ರಾಜಕೀಯ ದುರ್ಲಾಭ ಪಡೆಯುತ್ತಿದೆ. ಜನತಾ ಸರಕಾರವು ಬಡ ವಿದ್ಯಾರ್ಥಿಗಳಿಗೆ ಉಚಿತ ಪಠ್ಯ ಪುಸ್ತಕ ಹಾಗು ಸಮ ವಸ್ತ್ರವನ್ನು ಒದಗಿಸುತ್ತಿದ್ದುದನ್ನು ಈಗಿನ ಕಾಂಗ್ರೆಸ್ (ಐ) ಸರಕಾರ ರದ್ದು ಪಡಿಸಿದುದನ್ನು ಸಭೆಯಲ್ಲಿ ಖಂಡಿಸಲಾಯಿತು. ಹಾಗೂ ಈ ಸವಲತ್ತು ಬಡ ಶಾಲಾ ಮಕ್ಕಳಿಗೆ ಸರಕಾರ ಮುಂದುವರಿಸಬೇಕೆಂದು ಸರಕಾರವನ್ನು ಒತ್ತಾಯಿಸಲಾಗುವುದೆಂದು ಹೇಳಿದರು. ಯಾವುದೇ ಕಾರಣದಿಂದ ಹೆತ್ತವರು ತಮ್ಮ ಮಕ್ಕಳ ವಿದ್ಯಾಭ್ಯಾಸವನ್ನು ನಿಲ್ಲಿಸದೆ ಮುಂದುವರಿಸಲು ಮಕ್ಕಳಿಗೆ ಪ್ರೋತ್ಸಾಹ ನೀಡಬೇಕೆಂದರು. ಮಕ್ಕಳು ತಾವು ಒಳ್ಳೇ ವಿದ್ಯಾವಂತರಾಗಿ ಮುಂದಕ್ಕೆ ಉತ್ತಮ ಪ್ರಜೆಗಳಾಗಿ ಮುಂದೆ ಬರಬೇಕೆಂದು ಕರೆ ನೀಡಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಕೆ. ಈಶ್ವರ್ ಅವರು ಮಾತನಾಡುತ್ತಾ ಸಂಘದಿಂದ ನೀಡುತ್ತಿರುವ ಉಚಿತ ಪುಸ್ತಕದಿಂದ ತಮ್ಮ ವಿದ್ಯಾಭ್ಯಾಸಕ್ಕೆ ದೊರೆತ ಪ್ರಯೋಜನವನ್ನು ಸದುಪಯೋಗ ಪಡಿಸಿಕೊಂಡ ವಿದ್ಯಾಭ್ಯಾಸವನ್ನು ಮುಂದುವರಿಸುವುದರೊಂದಿಗೆ ಜನತೆಯ ಚಳುವಳಿಯಲ್ಲಿ ಭಾಗವಹಿಸಿ ಸಮಾಜದ ಏಳ್ಗೆಗೆ ಶ್ರಮಿಸಬೇಕೆಂದರು. ಪ್ರಾರಂಭದಲ್ಲಿ ಸ್ವಾಗತಿಸಿದ ಸಂಘದ ಕಾರ್ಯದರ್ಶಿ ಬಾಬು ದೇವಾಡಿಗರು ಪುಸ್ತಕ ವಿತರಣೆಗೆ ಸಹಾಯ ನೀಡಿದ ಗಣ್ಯ ವ್ಯಕ್ತಿಗಳಿಗೆ ಕೃತಜ್ಞತೆ ಸಲ್ಲಿಸಿ ಬಡವರಾದ ಬೀಡಿ ಕಾರ್ಮಿಕರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡಬೇಕೆಂದು ಕರೆ ನೀಡಿದರು. ಗಣ್ಯ ವ್ಯಕ್ತಿಗಳಿಗೆ ಕೃತಜ್ಞತೆಯನ್ನು ಸಲ್ಲಿಸಿ ವಂದನಾರ್ಪಣೆ ಮಾಡಿದರು.

ಗಮನಿಸಿ! ಗಮನಿಸಿ!!

ನಿಮ್ಮ ಪತ್ರಿಕೆ "ಐಕ್ಯರಂಗ"ದಲ್ಲಿ ಹೊಸ ಶಿರ್ಷಿಕೆಗಳು ಓದುಗರಿಗೆ ವಿಪುಲ ಅವಕಾಶ ನೀಡುವ ಪುಟಗಳು. ಎಲ್ಲಾ ಸಂಗಾತಿಗಳೂ ಉತ್ಸಾಹದಿಂದ ಪಾಲ್ಗೊಳುವ ಅವಕಾಶ.

''ಕಮ್ಯುನಿಸ್ಟ್ ಚಳುವಳಿ ನನ್ನನ್ನು ಸೆಳೆದ ಬಗೆ''

ದೇಶವನ್ನು ಕ್ರಾಂತಿಯತ್ತ ನಡೆಸುವ ಮಹತ್ವದ ಕೆಲಸಕ್ಕಾಗಿ ನಮ್ಮ ಸಂಗಾತಿಗಳು ಕಮ್ಯುನಿಸ್ಟ್ ಚಳುವಳಿಯತ್ತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದತ್ತ ಸೆಳೆಯಲ್ಪಟ್ಟಿದ್ದಾರೆ. ಒಬ್ಬೊಬ್ಬ ಸಂಗಾತಿಗಳದು ಒಂದೊಂದು ವಿಶಿಷ್ಟ ಅನುಭವ. ನೀವು ಕಮ್ಯುನಿಸ್ಟ್ ಚಳುವಳಿಯತ್ತ ಹಾಕಿದ ಹೆಜ್ಜೆಯನ್ನು 2/3 ಪುಟಗಳಲ್ಲಿ ಆಕರ್ಷಕವಾಗಿ ಬರೆದು ಕಳುಹಿಸಿ.

ಉತ್ತಮವಾದುದನ್ನು ಆರಿಸಿ ಪ್ರಕಟಿಸಲಾಗುತ್ತದೆ.

ಕೊಡುಗೆ: ಬರೆಯಲು ಸಾಧ್ಯವಿಲ್ಲದ ಹಿರಿಯ-ಕಿರಿಯ ಸಂಗಾತಿಗಳ ರೋಚಕ ಅನುಭವವನ್ನು ಬರೆಯಬಲ್ಲ ಸಂಗಾತಿಗಳು ಬರೆದು ಕಳುಹಿಸಬಹುದು. ಈ ವಿಶೇಷ ಪ್ರಯತ್ನಕ್ಕಾಗಿ ಬರೆದು ಕಳುಹಿಸಿದ ಸಂಗಾತಿಗಳಿಗೆ 3 ತಿಂಗಳ/6 ತಿಂಗಳ ಐಕ್ಯರಂಗ ಉಚಿತ.

''ನನ್ನ ಮನ ಮುಟ್ಟಿದ ಘಟನೆ''

ನಮ್ಮ ಕಣ್ಣ ಮುಂದೆಯೇ ಅನೇಕ ಘಟನೆಗಳು ಕ್ರಾಂತಿಕಾರಿಗಳಾದ ನಮ್ಮ ಮನಸ್ಸನ್ನು ಕಲಕುವ, ಮನ ಮುಟ್ಟುವ, ನಮ್ಮ ಚಳುವಳಿಯಲ್ಲಿ ನೆಚ್ಚುಗೆ ಮೂಡಿಸುವ ಘಟನೆಗಳು- ಕಾರ್ಮಿಕರ ರೈತರ ಸಾಮಾನ್ಯ ಜನರ ವೀರಾವೇಶದ ಕೃತ್ಯಗಳು - ಹೋರಾಟಗಳಲ್ಲಿ, ಹೋರಾಟಗಳ ಸೋಲಿನಲ್ಲಿ, ದಿನನಿತ್ಯದ ಬದುಕಿನಲ್ಲಿ ನಡೆಯುತ್ತಿರುತ್ತವೆ. ನಿಮ್ಮ ಮನಸ್ಸಿಗೆ ತಾಕಿದ ಘಟನೆ 'ಐಕ್ಯರಂಗ' ಓದುಗರಲ್ಲಿನ ಮನಸ್ಸಿಗೆ ಮುಟ್ಟಲು ಒಂದರಿಂದ ಎರಡು ಪುಟಗಳಲ್ಲಿ ಆಕರ್ಷಕವಾಗಿ ಬರೆದು ಕಳುಹಿಸಿ.

'ಐಕ್ಯರಂಗ' ಪ್ರಶ್ನೋತ್ತರ ವಿಭಾಗ

ನಮ್ಮ ಸಂಗಾತಿಗಳಿಗೆ ಹಲವಾರು ಪ್ರಶ್ನೆಗಳು ಎದುರಾಗುತ್ತಿರುತ್ತವೆ.

ಈ ಪ್ರಶ್ನೆಗಳಲ್ಲಿ ಹಲವು ವಿಧ. ವಿಶ್ವದಲ್ಲಿ ಎಷ್ಟು ಕಮ್ಯುನಿಸ್ಟ್ ದೇಶಗಳಿವೆ? ಅವು ಯಾವುವು? ವಿಯತ್ನಾಂನಲ್ಲಿ ಕ್ರಾಂತಿ ಯಾವಾಗ ನಡೆಯಿತು? ಎಂಬ ಮಾಹಿತಿಯನ್ನು ಬಯಸುವ ಪ್ರಶ್ನೆಗಳು. ಚಿಕ್ಕ ಉತ್ತರಗಳನ್ನು ಬಯಸುವ ಚಿಕ್ಕ ಪ್ರಶ್ನೆಗಳು. ಈ ಪ್ರಶ್ನೆಗಳನ್ನು "ಐಕ್ಯರಂಗ ಪ್ರಶ್ನೋತ್ತರ ವಿಭಾಗಕ್ಕೆ ಕಳುಹಿಸಿ. ಅಂಚೆ ಕಾರ್ಡಿನಲ್ಲಿ "ಐಕ್ಯರಂಗ" ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಕಾಂ. ಇ.ಎಂ.ಎಸ್. ಪ್ರಶ್ನೋತ್ತರ

ರಾಷ್ಟ್ರೀಯ, ಅಂತರರಾಷ್ಟ್ರೀಯ ಸೈದ್ಧಾಂತಿಕ, ರಾಜಕೀಯ ಪ್ರಶ್ನೆಗಳಿಗೆ ಕಾಂ. ಇ.ಎಂ.ಎಸ್. ಉತ್ತರಿಸಲೊಪ್ಪಿದ್ದಾರೆಂದು ಈಗಾಗಲೇ ಪ್ರಕಟಿಸಿದ್ದೇವೆ. ಪಕ್ಷದ ಪ್ರಧಾನ ಕಾರ್ಯದರ್ಶಿಯವರಿಂದಲೇ ಉತ್ತರಗಳನ್ನು ಪಡೆಯಬಹುದಾದ ಈ ಸುವರ್ಣಾವಕಾಶವನ್ನು ಸಂಗಾತಿಗಳು ಸದುಪಯೋಗಪಡಿಸಿಕೊಳ್ಳಬೇಕು. ಕಾಂ. "ಇ.ಎಂ.ಎಸ್. ಪ್ರಶ್ನೋತ್ತರ ವಿಭಾಗ" ಎಂದು ಸ್ಪಷ್ಟವಾಗಿ ನಮೂದಿಸಿ.

ಗಮನಿಸಿ , ಈ ಎಲ್ಲಾ ಕಾಲಂಗಳು ಜುಲೈ ಒಂದರಿಂದ ಪ್ರಾರಂಭ ಸಂಗಾತಿಗಳೇ ತ್ವರೆ ಮಾಡಿ.

ಪಂಚವಾರ್ಷಿಕ ಯೋಜನೆಗಳು ಏಕೆ ಜನಪರ ಬದಲಾವಣೆ ತರಲಿಲ್ಲ?

ಎಂಟನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ಚರ್ಚೆ ಆರಂಭ ವಾಗಿದೆ. ನವಂಬರ್ 1989ರ ಚುನಾವಣೆಗಳ ನಂತರ ದೇಶದ ರಾಜಕೀಯದಲ್ಲಿ ಕಂಡುಬರುತ್ತಿರುವ ಹೊಸವಾತಾವರಣದಲ್ಲಿ ಈ ಚರ್ಚೆ ನಡೆಯುತ್ತಿದೆ. ಆದರೆ ಹೊಸ ಸರಕಾರ ಆರ್ಥಿಕ ರಂಗದಲ್ಲಿ ಇದುವರೆಗೆ ತೋರ್ಪಡಿಸಿರುವ ನಿಲುವು ಈ ಬಗ್ಗೆ ಬಹಳ ನಿರೀಕ್ಷೆಯೇನನ್ನೂ ಮೂಡಿಸಿಲ್ಲ. ಈ ಹಿನ್ನೆಲೆಯಲ್ಲಿ ಭಾರತದ ಯೋಜನಾ ಪ್ರಕ್ರಿಯೆಯ ಬಗ್ಗೆ ಒಂದು ವಿಹಂಗಮ ನೋಟ ಬೀರುತ್ತಾ, ಕಾಂ. ಇ. ಎಂ.ಎಸ್ ನಂಬೂದರಿಪ್ಪಾಡ್ ನಾವೀಗ ಸ್ಪಷ್ಟವಾಗಿ ಕಾಣುತ್ತಿರುವ ನಕಾರಾತ್ಮಕ ಅಂಶಗಳು ಹೇಗೆ ನೆಹರೂ ಮಾದರಿಯಲ್ಲೇ ಅಡಕವಾಗಿದೆ, ಭಾರತದ ಸ್ವಾತಂತ್ರ್ಯ ಆಂದೋಲನದ ಚೇತನವನ್ನು ಉಳಿಸಿ ಬೆಳೆಸುವ ಎಡಶಕ್ತಿಗಳ ಹೋರಾಟ ಈಗಲೂ ಏಕೆ ಮುಂದುವರೆಯಬೇಕಾಗಿದೆ ಎಂದು ವಿವರಿಸಿದ್ದಾರೆ.

ಭಾರತದಲ್ಲಿ ಯೋಜನಾ ಪ್ರಕ್ರಿಯೆಗೆ ಒಂದು ಹೊಸ ಒತ್ತು ದೊರೆತದ್ದು ಐವತ್ತರ ದಶಕದ ಮಧ್ಯಭಾಗದಲ್ಲಿ. ಎರಡನೇ ಪಂಚವಾರ್ಷಿಕ ಯೋಜನೆ ರೂಪುಗೊಳ್ಳುತ್ತಿತ್ತು. ತ್ವರಿತ ಕೈಗಾರಿಕೀಕರಣ, ಅದಕ್ಕಾಗಿ ಭಾರೀ ಕೈಗಾರಿಕೆಗಳ ಮೇಲೆ ವಿಶೇಷ ಒತ್ತು, ಇವು ಸಾರ್ವಜನಿಕ ವಲಯದಲ್ಲಿರಬೇಕು. ಇದು ದ್ವಿತೀಯ ಯೋಜನೆ ರೂಪಿಸುವಲ್ಲಿ ಸಮಾಜವಾದಿ ದೇಶಗಳ, ಮುಖ್ಯವಾಗಿ ಸೋವಿಯತ್ ಒಕ್ಕೂಟದ ಪರಿಣತರ ನೆರವನ್ನು ಪಡೆದಿತ್ತು. ಆದ್ದರಿಂದಲೇ ಭಾರತ ಸಮಾಜವಾದಿ ಸೋವಿಯತ್ ಒಕ್ಕೂಟದ ಬಾಲಂಗೋಚಿಯಾಗುತ್ತಿದೆ ಎಂಬ ದುಷ್ಟ ಟೀಕೆಗಳು ಬಂದವು, ಯೋಜನಾ ಪ್ರಕ್ರಿಯೆಗೆ ತಪ್ಪು ಒತ್ತಾಸೆ ನೀಡುತ್ತಿದ್ದಾರೆ ಎಂದು ನೆಹರೂರವರನ್ನು ಟೀಕಿಸಲಾಯಿತು.

ಆದರೆ ಭಾರತೀಯ ಯೋಜನೆಗೆ ಈ ಹೊಸ ಒತ್ತಾಸೆಯ ಪ್ರೇರಣೆ ನಿಜವಾಗಿ ಬಂದದ್ದು ಮೈಸೂರಿನ ಇಂಜಿನಿಯರ್–ಮುತ್ಸದ್ದಿ ಸರ್ ಎಂ. ವಿಶ್ವೇಶ್ವರಯ್ಯನವರಿಂದ. Planned Economy for India (ಭಾರತಕ್ಕೆ ಯೋಜನಾಬದ್ಧ ಆರ್ಥಿಕ). ಎಂಬ ಅವರ ಗ್ರಂಥ 1930 ದಶಕದ ಮಧ್ಯಭಾಗದಲ್ಲಿ ಪ್ರಕಟವಾಗಿತ್ತು. ಬೇರೆ ಹಲವೆಡೆ ಆರ್ಥಿಕ ರಂಗದಲ್ಲಿ ಮಾತ್ರ ಯೋಜನೆಯಿದ್ದರೆ ಸೋವಿಯತ್ ಒಕ್ಕೂಟದಲ್ಲಿ ಅದು ಎಲ್ಲ ರಂಗಗಳನ್ನೂ ಒಳಗೊಂಡಿತ್ತು ಎಂಬ ಅಂಶವನ್ನು ಅವರು ಮುಖ್ಯವಾಗಿ ಗಮನಿಸಿದ್ದರು.

ಅವರು ಹೀಗೆ ಗಮನಿಸಿದ ಒಂದೆರಡು ವರ್ಷಗಳ ನಂತರ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದ ಸುಭಾಸ್‌ಚಂದ್ರ ಬೋಸ್ ಒಂದು ರಾಷ್ಟ್ರೀಯ ಯೋಜನಾ ಆಯೋಗ ರಚಿಸಿದರು. ಜವಾಹರಲಾಲ್ ನೆಹರೂ ಸ್ವತಂತ್ರ ಭಾರತದ ಮೊದಲ ಪ್ರಧಾನಿಯಾಗಿದ್ದಾಗ ಅಧಿಕೃತ ಯೋಜನಾ ಆಯೋಗವನ್ನು ರಚಿಸಿ. ಅವರೇ ಆದರ ಅಧ್ಯಕ್ಷರಾದರು. ಸ್ವತಂತ್ರ ಪೂರ್ವದ ಅವರ ಅಧ್ಯಕ್ಷತೆಯ ಸಮಿತಿಯ ಕೆಲಸ ಟಾಟಾ, ಬಿರ್ಲಾ ಮತ್ತಿತರ ದೇಶದಉನ್ನತ ಉದ್ಯಮಿಗಳಿಗೂ 'ಮುಂಬೈ ಯೋಜನೆ' ಯೆಂದು ಹೆಸರಾದ ದಸ್ತಾವೇಜು ಸಿದ್ಧಪಡಿಸಲು ನೆರವಾಯಿತು,

ಹೀಗೆ ಆರಂಭದಲ್ಲಿ ವಿಶ್ವೇಶ್ವರಯ್ಯನವರ ಪ್ರಯತ್ನ,ನಂತರ 'ಮುಂಬೈಯೋಜನೆ ಪರಿಣಾಮವಾಗಿ ಯೋಜನಾ ಆಯೋಗದ ಅಧ್ಯಕ್ಷ ನೆಹರೂ ಮಹಾತ್ವಾಕಾಂಕ್ಷೆಯ ಎರಡನೇ ಪಂಚವಾರ್ಷಿಕ ಯೋಜನೆಯನ್ನೂ ರೂಪಿಸಲು ಸಮಾಜವಾದಿ ದೇಶಗಳ ನೆರವು ಕೇಳುವಂತೆ ಮಾಡಿತು.

'ರಷ್ಯಾದ ಮುಕ್ತಿಯಾಗಬೇಕಾದರೆ ಭಾರೀ ಕೈಗಾರಿಕೆ ಅಗತ್ಯ, ಆದಕ್ಕೆ ಪ್ರಭುತ್ವದ ನೆರವು, ಧನಬೇಕು. ಇದನ್ನು ನಾವು ಪಡೆಯದಿದ್ದರೆ ನಾವು ಒಂದು ನಾಗರಿಕ ದೇಶವಾಗಿ ನಾಶವಾಗುತ್ತವೆ'ಎಂಬ ಲೆನಿನ್ ಉಕ್ತಿಯನ್ನು ಉದ್ಧರಿಸುತ್ತಾ ವಿಶ್ವೇಶ್ವರಯ್ಯ "ರಷ್ಯಾದಂತೆ ಭಾರೀ ಕೈಗಾರಿಕೆ ರಾಷ್ಟ್ರೀಯ ಪ್ರಗತಿಯ ಮೇಲೆ ಹಲವು ದಿಕ್ಕುಗಳಿಂದ ಪ್ರಭಾವ ಬೀರುತ್ತದೆ. ಆದ್ದರಿಂದ ಅದಕ್ಕೆ ಪ್ರಭುತ್ವದ, ಸರಕಾರದ ನೆರವು ಧನ ಅಗತ್ಯ. ಅದನ್ನು ಪಡೆಯಲು ಸಾಧ್ಯವಾಗದಿದ್ದರೆ ನಾವೂ ಕೂಡಾ ಒಂದು ನಾಗರಿಕ ದೇಶವಾಗಿ ನಾಶವಾಗುತ್ತೇವೆ'' ಎಂದಿದ್ದರು; ಲೆನಿನ್‌ರ ಯೋಜನೆ ಕುರಿತಾದ ದೃಷ್ಟಿಕೋನ ಭಾರತಕ್ಕೂ ಸಂಗತ ಎಂದಿದ್ದರು.

> ಎರಡನೇ ಯೋಜನೆಯಲ್ಲಿ ನೆಹರೂ ಯೋಜನೆಯ ಪ್ರಕ್ರಿಯೆಗೆ ತಪ್ಪು ದಿಕ್ಕು ನೀಡಿದರು ಎಂದು ಟೀಕಿಸಲಾಯಿತು. ಆದರೆ ಎರಡನೇ ಯೋಜನೆಗೆ ಈ ದಿಕ್ಕು ನೀಡಿದ ಪ್ರೇರಣೆ ಕೇವಲ ನೆಹರೂರವರದ್ದೇ? ಅಲ್ಲ.

'ಮುಂಬೈ ಯೋಜನೆ' ರೂಪಿಸಿದವರ ದೃಷ್ಟಿಕೋನವೂ ಸುಮಾರಾಗಿ ಇದೇ ಆಗಿತ್ತು. ತ್ವರಿತ ಕೈಗಾರಿಕೀಕರಣದಲ್ಲಿ ಆಸಕ್ತಿ ಹೊಂದಿದ್ದ ಅವರೂ ಸರಕಾರದ ಮಧ್ಯಪ್ರವೇಶ ಮತ್ತು ನಿಯಂತ್ರಣವಿಲ್ಲದೆ ಇದು ಸಾಧ್ಯವಿಲ್ಲ ಎಂದು ಅರಿತಿದ್ದರು. ಆದರೆ ಅವರ ದೃಷ್ಟಿಯಲ್ಲಿ ಇದರರ್ಥ ಸರಕಾರವೇ ಈ ಉದ್ದಿಮೆಗಳ ಒಡೆತನ, ನಿರ್ವಹಣೆ ವಹಿಸಿಕೊಳ್ಳಬೇಕೆಂದಲ್ಲ. ಕೆಲವೊಂದು ಸಂದರ್ಭಗಳಲ್ಲಿ ಕೂಡಾ ಸರಕಾರದ ಕೈಯಲ್ಲೇ ಇರಬೇಕಾದೀತು ಎಂದು ಅವರೂ ಒಪ್ಪಿದರೂ ಇ

> ಖಾಸಗೀ ಬಂಡವಾಳಶಾಹಿಯ ಬೆಳವಣಿಗೆಗೆ ಸರಕಾರೀ ಮಧ್ಯ ಪ್ರವೇಶದ ಬಳಕೆ – ಇದೇ ಯೋಜನೆ ಕುರಿತಾದ ಆ ದೃಷ್ಟಿಕೋಣದ ಸಾರಾಂಶ.

ಇಂತಹ ಸಂದರ್ಭಗಳಲ್ಲಿ ಕೂಡಾ ನಂತರ ಖಾಸಗೀ ಹಣಕಾಸು ಈ ಉದ್ದಿಮೆಗಳನ್ನು, ಸಂಸ್ಥೆಗಳನ್ನು ವಹಿಸಿಕೊಳ್ಳಲು ಸಿದ್ಧವಿದ್ದರೆ ಅವುಗಳ ಒಡೆತನ ಸರಕಾರದಿಂದ ಖಾಸಗಿಯವರಿಗೆ ಹಸ್ತಾಂತರಿಸಬೇಕು ಎಂದೂ ಅವರು ತಮ್ಮ 'ಮುಂಬೈ ಯೋಜನೆ'ಯಲ್ಲಿ ಹೇಳಿದ್ದರು.

ಹೊಸ ಉದ್ದಿಮೆಗಳನ್ನು ಸ್ಥಾಪಿಸಲು ಸರಕಾರದಿಂದ ಹಣಕಾಸು ಮತ್ತು ಇತರ ನೆರವು ಅಥವಾ ಸರಕಾರ ಆರಂಭಿಸಿ ಬೆಳೆಸಿದ ಉದ್ದಿಮೆಗಳನ್ನು ವಹಿಸಿಕೊಳ್ಳುವುದು ಅಥವಾ ಅವುಗಳ ನಿರ್ವಹಣೆಯ ಹಕ್ಕು ಗಳಿಸುವುದು. ಹೀಗೆ ಖಾಸಗೀ ಬಂಡವಾಳ ಶಾಹಿಯ ಬೆಳವಣಿಗೆಗೆ ಸರಕಾರೀ ಮಧ್ಯ ಪ್ರವೇಶದ ಬಳಕೆ – ಇದೇ ಯೋಜನೆ ಕುರಿತಾದ ಈ ದೃಷ್ಟಿ ಕೋಣದ ಸಾರಾಂಶ.

ನಿಜ. ದೇಶದ ಪ್ರಧಾನಿ ಮತ್ತು ತೀವ್ರಗಾಮಿ ರಾಜಕೀಯ ಮುಖಂಡ 'ಸಾರ್ವಜನಿಕ ವಲಯಕ್ಕೆ ಉನ್ನತ ಸ್ಥಾನ' ದ ಮಾತಾಡಿದ್ದರು. ಆದರೆ ಅವರಿಗೆ ಒಂದು ರಾಜಕೀಯ ಅಗತ್ಯವಷ್ಟೇ ಆಗಿತ್ತು. ವಸ್ತುತಃ ಖಾಸಗೀ ವಲಯಕ್ಕೆ ಅವರ ದೃಷ್ಟಿಕೋಣದಲ್ಲಿ ವ್ಯಾಪಕ ಸ್ಥಾನ ತೆರವಿಡಲಾಗಿತ್ತು. "ಮಿಶ್ರ ಆರ್ಥಿಕದ ಘೋಷಣೆ ಅವರ ರಾಜಕೀಯ ಮತ್ತು ಪ್ರಾಯೋಗಿಕ ನಿಲುವಾಗಿತ್ತು. ಹೌದು, ಯೊಜನಾ ಪ್ರಕ್ರಿಯೆಯಲ್ಲಿ ಸರಕಾರೀ ಮಧ್ಯ ಪ್ರವೇಶಕ್ಕೆ ಅವರು ಕೊಡಮಾಡಿದ ಅವಕಾಶ 'ಮುಂಬೈಯೋಜನೆ'ಯ ಭಾರತೀಯ ಬೂರ್ಜ್ವಾಗಳು ಸಹಿಸಬಹುದಾದಕ್ಕಿಂತ ಜಾಸ್ತಿಯೇ ಇತ್ತು ಆದರೆ ಆ ಅನುಭವೀ ವ್ಯಾಪಾರಸ್ಥರು ಅದನ್ನು ಒಪ್ಪಿಕೊಳ್ಳಲು ಸಿದ್ಧರಿದ್ದರು. 'ಸಾರ್ವಜನಿಕ ವಲಯಕ್ಕೆ ಉನ್ನತಸ್ಥಾನದ ಮಾತು' ಎಂಬ ನೆಹರೂ ರಲ್ಲಿದ್ದ ರಾಜಕಾರಣಿಯ ದಾಖಲೆಗಾಗಿಯಷ್ಟೆ ಎಂದರಿತಿದ್ದ ಅವರು ನೆಹರು ಮಾದರಿಗೆ ಒಪ್ಪಿದರು.

ನೆಹರೂ ಮಗಳು ಹಾಗೂ ಆಕೆಯ ಮಗನ ಆಡಳಿತಕಾಲದಲ್ಲಿ 'ಸಾರ್ವಜನಿಕ ವಲಯದ ಉನ್ನತ ಸ್ಥಾನ' ಬಹಳಷ್ಟು ಸವೆತ ಕಂಡಿತೆಂಬುದು ನಮಗೀಗ ಗೊತ್ತಿದೆ. ನಾಚಿಕೆಯಿಲ್ಲದೆ 'ಉದಾರೀಕರಣ'ದ ಪ್ರತಿಪಾದನೆ ಮಾಡಿದ ರಾಜೀವಗಾಂಧಿ ಸಮಯದಲ್ಲಿ ಅದು ತೀವ್ರವಾಗಿ ಕಂಡುಬಂತು. ಹೀಗೆ ಪ್ರಭುತ್ವವು ಆರ್ಥಿಕದ ಮೇಲೆ ಹೆಚ್ಚೆಚ್ಚು ಹತೋಟಿ ಹೊಂದುವ ಬದಲು ಖಾಸಗೀ ವಲಯಕ್ಕೆ ಹೆಚ್ಚಿನ ಹತೋಟಿ ದೊರೆಯುವ ದಿಕ್ಕಿನಲ್ಲಿ ಭಾರತೀಯ ಯೋಜನಾ ಪದ್ಧತಿ ನಿರಂತರವಾಗಿ ಸಾಗಿದೆ. ಇಂತಹದೊಂದು ಬೆಳವಣಿಗೆಯ 'ಕೀರ್ತಿ' ನೆಹರೂರವರ ಉತ್ತರಾಧಿಕಾರಿಗಳಿಗೆ ಸಲ್ಲುತ್ತದಾದರೂ 'ಮಿಶ್ರ ಆರ್ಥಿಕ' ದ ಮೇಲೆ ನಿಂತ ನೆಹರೂ ಯೋಜನಾ ಮಾದರಿಯಲ್ಲೇ ಇದು ಅಡಕವಾಗಿದೆ ಎಂಬುದನ್ನು ಗಮನಿಸಬೇಕು. ಅದೇ ರೀತಿ ಭಾರತದ ಯೋಜನೆ ಸೋವಿಯತ್ ಮಾದರಿಯನ್ನು ಒಂದು ರೀತಿಯಲ್ಲಿ ಅನುಸರಿಸಿದೆ ಎಂದು ಹೇಳಿದರೂ ಒಂದು ಮುಖ್ಯ ವ್ಯತ್ಯಾಸವಿದ್ದುದನ್ನೂ ಗಮನಿಸಬೇಕು. ಯಾವ ವಿದೇಶೀ ನೆರವಿಲ್ಲದೆ ಸೋವಿಯತ್ ಒಕ್ಕೂಟ ತನ್ನ ಯೋಜನಾ ಪ್ರಯತ್ನ ಕೈಗೊಳ್ಳಬೇಕಿತ್ತು. ಆದರೆ ಭಾರತ ಹಾಗಲ್ಲ. ಅದರಿಂದಾಗಿ ಅಂತರಾಷ್ಟ್ರೀಯ ಬೂರ್ಜ್ವಾ ವರ್ಗದ ಅಂಗಗಳಾದ ವಿಶ್ವಬ್ಯಾಂಕ್, ಐ.ಎಂ.ಎಫ್, ಖಾಸಗಿ ಬಹುರಾಷ್ಟ್ರೀಯ ವ್ಯಾಪಾರೀ ಸಂಸ್ಥೆಗಳ ಬಲವಾದ ಒತ್ತಡ ಭಾರತದ ಮೇಲಿದೆ.

ಭಾರತ ತನ್ನ ಯೋಜನಾ ಪದ್ಧತಿ ಆರಂಭಿಸಿದ್ದು ಬ್ರಿಟಿಷ್ ಕಾಮನ್ವೆಲ್ತ್‌ನ ಸದಸ್ಯವಾಗಿಯೇ. ಮೊದಲ ಯೋಜನೆ ರೂಪಿಸಿದ್ದು ಕಾಮನ್ವೆಲ್ತ್‌ನ ಆಶ್ರಯದಲ್ಲಿಯೇ. ಅಲ್ಲದೆ ಸಾಮ್ರಾಜ್ಯಶಾಹೀ ಹಿರಿಯಣ್ಣ ಅಮೇರಿಕಾದ ನೆರವು ಗಿಟ್ಟಿಸುವ ನಿರೀಕ್ಷೆಯಿಂದ ನೆಹರೂ ಆ ದೇಶಕ್ಕೆ ತನ್ನ ಮೊದಲ ಯಾತ್ರೆ ಕೂಡಾ ಕೈಗೊಂಡಿದ್ದರು. ಅವೆಲ್ಲಾ ನಿರೀಕ್ಷೆಗಳು ಹುಸಿಯಾದ ಮೇಲಷ್ಟೇ ಸಮಾಜವಾದಿ ದೇಶಗಳತ್ತ ಅವರು ಸಹಾಯಕ್ಕಾಗಿ ತಿರುಗಿದ್ದು. ಹೀಗೆ "ಸಮಾಜವಾದೀ ದೇಶಗಳತ್ತ ಒಲವು'' ಎಂಬ ಢಂಗುರ ಕೇವಲ ಬದಲಾದ ರಾಜಕೀಯ ಪರಿಸ್ಥಿತಿಯ ಪ್ರತಿಫಲನವಾಗಿತ್ತಷ್ಟೇ. ಆದರೆ ಇದು ನೆಹರೂಗೆ ಪ್ರಯೋಜನಕಾರಿಯೂ ಆಗಿತ್ತು. ತನ್ನದು ಸಮಾಜವಾದದತ್ತ ಒಲವಿನ ಸರಕಾರ ಎಂದು ಎಡ ಪ್ರಜಾಪ್ರಭುತ್ವ ಶಕ್ತಿಗಳ ಬೆಂಬಲ ಪಡೆಯುವುದು ಅದಕ್ಕೆ ಸಾಧ್ಯವಾಯಿತು.

ಆದರರ್ಥ ಇದು ದೇಶದ ಪ್ರಜಾಪ್ರಭುತ್ವ ಆಂದೋಲನದ ಬಳವಣಿಗೆಗೆ ಏನೂ ಪ್ರಯೋಜನಕಾರಿಯಾಗಲಿಲ್ಲ ಎಂದೇನಲ್ಲ. ವಾಸ್ತವವಾಗಿ ದೇಶದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನೂ ತೀವ್ರಗಾಮಿಗೊಳಿಸಲು ಅದು ಬಹಳ ನೆರವಾಯಿತು. ಪ್ರಜಾಪ್ರಭುತ್ವ ಮುನ್ನಡೆ, ದೇಶದ ಪ್ರಗತಿ ಸಮಾಜವಾದದತ್ತ ತಿರುಗುವುದರಿಂದಲೇಸಾಧ್ಯ ಎಂಬ ಅಭಿಪ್ರಾಯ ಮೂಡುವಂತಾಯಿತು. ಹಿಂದೆ 1930 ರ ದಶಕದ ಉತ್ತರಾರ್ಧದಲ್ಲಿ ಕಾಂಗ್ರೆಸ್ ರಾಜಕೀಯದಲ್ಲಿ ನೆಹರೂ ಎಡದತ್ತ ತಿರುಗಿ ಸ್ವಾತಂತ್ರ್ಯ ಆಂದೋಲನದಲ್ಲಿ ತೀವ್ರಗಾಮಿತ್ವ ತರಲು ನೆರವಾದಂತೆ ಈ ಯೋಜನಾ ತಿರುವು ಕೂಡಾ ಎರಡನೇ ಮಹಾಯುದ್ಧ ನಂತರ ಸಂದರ್ಭದಲ್ಲಿ ಸ್ವತಂತ್ರ ಭಾರತದ ಪ್ರಜಾಪ್ರಭುತ್ವ ಆಂದೋಲನದಲ್ಲಿ ತೀವ್ರಗಾಮಿತ್ವ

> ಮೊದಲು ವಿಶ್ವ ಬಂಡವಾಳಶಾಹೀ ದೇಶಗಳತ್ತ ನಿರೀಕ್ಷೆಯಿಂದ ನೋಡುತ್ತಿದ್ದ ನೆಹರೂ, ಅವರಿಂದ ನಿರಾಶರಾದ ಮೇಲೆಯೇ ಸಮಾಜವಾದಿ ದೇಶಗಳತ್ತ ತಿರುಗಿದರು.

ತರುವಲ್ಲಿ ಅನುಕೂಲಮಾಡಿಕೊಟ್ಟಿತು. ಆದ್ದರಿಂದಲೇ ಎರಡನೇ ಯೋಜನೆಯಲ್ಲಿ ಕೊಟ್ಟ ಹೊಸ ಒತ್ತನ್ನು ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಬೆಂಬಲದ ದನಿ ಎಷ್ಟು ಕ್ಷೀಣವಾಗಿದ್ದರೂ ಆದಾಗಲೇ ಹುಟ್ಟಿದ್ದ ಸ್ವತಂತ್ರ ಪಕ್ಷ ಮತ್ತಿತರ ಬಲಪ್ರತಿಗಾಮಿ ಶಕ್ತಿಗಳು ದ್ವಿತೀಯ ಯೋಜನೆ ನಡೆಸಿದ ತೀವ್ರ ದಾಳಿಯನ್ನು ತಡೆಹಿಡಿಯುವುದರಲ್ಲಿ ಬಹಳಷ್ಟು ಸಹಾಯಕವಾಯಿತು.

ಹೀಗೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ತ್ವರಿತ ಕೈಗಾರಿಕೀಕರಣದ ಹೊಸ ಒತ್ತಿನ ಬಗ್ಗೆ ಸಕಾರಾತ್ಮಕ ವಿಶ್ಲೇಷಣೆಯ ಜೊತೆಗೆ ಕಮ್ಯುನಿಷ್ಟ್ ಪಕ್ಷ ನೆಹರೂರವರ ಈ ಧೋರಣೆಯಲ್ಲಿನ ನಕಾರಾತ್ಮಕ ಅಂಶಗಳನ್ನು ಎತ್ತಿ ತೋರಿಸಿತು

ಒಂದು ಯೋಜನೆ ಪ್ರಜಾಸತ್ತಾತ್ಮಕವಾಗಿರಬೇಕಾದರೆ ಅದು ಭಾರತದಲ್ಲಿ ಬ್ರಿಟಿಷ್ ಬಂಡವಾಳದ, ಭೂಮಾಲಿಕತ್ವದ ಮತ್ತು ಗುತ್ತೇದಾರಿ ಬಂಡವಾಳಿಗರ ಸ್ಥಾನಮಾನವನ್ನು ದುರ್ಬಲಗೊಳಿಸಬೇಕು. ಅದು ರೈತ ಸಮೂಹಗಳ ಹೊರೆ ಇಳಿಸಬೇಕು; ಜನರ ಜೀವನ ಮಟ್ಟವನ್ನು ನಿರಂತರವಾಗಿ ಹೆಚ್ಚಿಸುತ್ತಾ ಬಂದು ವಿಸ್ತಾರಗೊಳ್ಳುತ್ತಾ ಹೋಗುವ ಆಂತರಿಕ ಮಾರುಕಟ್ಟೆ ಸೃಷ್ಟಿಸಬೇಕು. ನ್ಯಾಯಯುತ ತೆರಿಗೆ ವ್ಯವಸ್ಥೆಯ ಮೇಲೆ ಅದು ನಿಂತಿರಬೇಕು. ಅಗತ್ಯ ಸಂಪನ್ಮೂಲಗಳನ್ನು ತೆರಬಲ್ಲ ಸಾಮರ್ಥ್ಯವುಳ್ಳವರಿಂದ ಅಂದರೆ ವಿದೇಶೀ ಬಂಡವಾಳಿಗರು, ಭೂಮಾಲಕರು ಮತ್ತು ಬೂರ್ಜ್ವಾವರ್ಗದಿಂದ ಸಂಗ್ರಹಿ[illegible] ಬೇಕು. ಒಂದು ಸ್ಥಿರ ಬೆಲೆ ವ್ಯವಸ್ಥೆಯನ್[illegible] ಯೋಜನೆ ರಚಿಸಬೇಕು. ಆರೋಗ್ಯ, ವಸತಿ[illegible] ಸಂಸ್ಕೃತಿ ಮುಂತಾದ ವಲಯಗಳಲ್ಲಿ[illegible] ಸರ್ವತೋಮುಖ ಮುನ್ನಡೆ ಸಾಧಿಸಲು ಅದು[illegible] ಅನುವು ಮಾಡಿಕೊಡಬೇಕು. ಯೋಜನೆ ಎಂದ[illegible] ಪ್ರಗತಿಪರ ಕಾರ್ಮಿಕರ ಶಾಸನಗಳ ಅಂಗೀಕಾರ[illegible] ಜನರ ಸಹಕಾರ ಹಾಗೂ ಪ್ರಜಾಪ್ರಭುತ್ವ[illegible] ನಾಗರಿಕ ಹಕ್ಕುಗಳನ್ನು ವಿಸ್ತರಿಸಿ ಜನತೆಯ[illegible] ಉತ್ಸಾಹವನ್ನು ಹರಿಯಬಿಡುವುದು[illegible] ಎಂದಾಗಬೇಕು.

ಹೀಗೆಂದಿತ್ತು ನಾಲ್ಕನೇ ಮಹಾಧಿವೇಶನ[illegible] ಅಂಗೀಕರಿಸಿದ ಠರಾವು. ಅಂದರೆ ನೆಹರೂ[illegible] ಸರಕಾರ ಅನುಸರಿಸುತ್ತಿದ್ದ ಪ್ರತಿಯೊಂದು[illegible] ಸಾಮಾಜಿಕ, ಆರ್ಥಿಕ, ರಾಜಕೀಯ ಧೋರಣೆ'ಗಳನ್ನು ಬದಲಿಸಬೇಕೆಂದು ಕಮ್ಯುನಿಸ್ಟರು ಒತ್ತಾಯಿಸಿದ್ದರು. ಆದರೆ ನೆಹರೂ ಸರಕಾರ ನಿರಾಕರಿಸಿತು. ಬ್ರಿಟಿಷ್ ಬಂಡವಾಳ ಹಾಗೂ ಭೂಮಾಲಿಕರೊಂದಿಗೆ ರಾಜಿ ಮಾಡಿಕೊಂಡಿತು. ಜತೆಗೆ ಅಮೆರಿಕಾ ನೇತೃತ್ವದ ವಿಶ್ವ ಬಂಡವಾಳಶಾಹಿಯೊಂದಿಗೆ ಹೊಸ ಸಂಬಂಧಗಳನ್ನು ಬೆಸೆದು ಕೊಂಡಿತು. ಬೂರ್ಜ್ವಾಗಳ ಸ್ಥಾನಮಾನ ಕುಂಠಿತವಾಗುವ ಬದಲು ನಮ್ಮ ದೇಶದ ಆರ್ಥಿಕ ಮತ್ತು ರಾಜಕೀಯ ಜೀವನದಲ್ಲಿ ಮತ್ತಷ್ಟು ಬಲಗೊಂಡಿತು. ನ್ಯಾಯಯುತ ತೆರಿಗೆ ವ್ಯವಸ್ಥೆಯ ಬದಲು ಬಡವರನ್ನು ಹಿಂಡುವ ವ್ಯವಸ್ಥೆ ಮುಂದುವರೆಯಿತು. ಬೆಲೆ ಗಗನಕ್ಕೇರಲು ಬಿಡಲಾಯಿತು. ಸರ್ವತೋಮುಖ ಮುನ್ನಡೆ ಬದಲು ಎಲ್ಲಾ ರಂಗಗಳಲ್ಲಿ ಹಿನ್ನಡೆ ಕಂಡು ಬಂತು. ಪ್ರಗತಿಪರ ಕಾರ್ಮಿಕ ಶಾಸನಗಳ ಬದಲು ಬಂಡವಾಳಶಾಹಿ – ಪರ ಶಾಸನಗಳ ಜಾರಿಯಾಗಲಾರಂಭಿಸಿತು.

ಈ ಜನ–ವಿರೋಧಿ ಧೋರಣೆಗಳ ದುಷ್ಪರಿಣಾಮಗಳನ್ನು ಈಗ ಜನ ಸಮಾನ್ಯರ ಜೀವನದ ಎಲ್ಲಾ ವಿಭಾಗಗಳಲ್ಲಿ ಕಾಣುತ್ತಿದ್ದೇವೆ. ಅವರ ಪರಿಸ್ಥಿತಿ ಹದಗೆಡುತ್ತಾ ಸಾಗಿದೆ. ಅತ್ತ ಯೋಜನಾ ಪ್ರಕ್ರಿಯೆಯ ಲಾಭ ದೊರೆತಿರುವುದು ಹಿಡಿಯಷ್ಟು ದೊಡ್ಡ ಭೂಮಾಲಿಕರು, ಗುತ್ತೇದಾರಿ ಬಂಡವಾಳಶಾಹಿಗಳು ಮತ್ತವರ ಬಾಲ ಬಡುಕರಿಗಷ್ಟೆ.

> ದ್ವಿತೀಯ ಯೋಜನೆಯ ತ್ವರಿತ ಕೈಗಾರೀಕರಣದ ಹೊಸ ಒತ್ತಿನ ಸಕಾರಾತ್ಮಕ ವಿಶ್ಲೇಷಣೆಯ ಜೊತೆಗೇ ನೆಹರೂರವರ ಧೋರಣೆಯಲ್ಲಿನ ನಕಾರಾತ್ಮಕ ಅಂಶಗಳನ್ನು ಕಮ್ಯುನಿಸ್ಟರು ಎತ್ತಿ ತೋರಿದ್ದರು. ನೆಹರೂ ಸರಕಾರ ಅದರತ್ತ ಲಕ್ಷ್ಯ ಕೊಡಲಿಲ್ಲ. ಅದರ ದುಷ್ಪರಿಣಾಮಗಳನ್ನು ಕಾಣುತ್ತಿದ್ದೇವೆ.

ಈ ಶ್ರೀಮಂತ ಅಲ್ಪ ಸಂಖ್ಯೆಯ ಮಂದಿ ಮತ್ತು ಬಹುಪಾಲು ಬಡಜನರ ನಡುವಿನ ಕಂದರ ಹೆಚ್ಚುತ್ತಿರುವ ನಡುವೆಯೇ ಕೇಂದ್ರ, ರಾಜ್ಯ ಸರಕಾರ ಬಜೆಟ್ ಕೊರತೆಗಳು ಏರುತ್ತಲೇ ಇದ್ದು ದೇಶ ಆಂತರಿಕ ಸಾಲ ಬಲೆಯಲ್ಲಿ ಸಿಲುಕಿಕೊಳ್ಳುತ್ತದೆ. ಅದೇ ರೀತಿ ವಿದೇಶೀ ವ್ಯಾಪಾರ, ವಿನಿಮಯದಲ್ಲೂ, ಹಿಂದಿನ ಸಾಲ ತೀರಿಸಲು, ಅದರ ಬಡ್ಡಿ ಕಟ್ಟಲು ಹೊಸ ಸಾಲ – ಇದು ಆಂತರಿಕ ಮತ್ತು ವಿದೇಶೀ ಹಣಕಾಸಿನ ಪ್ರಸ್ತುತ ಚಿತ್ರ.

ರಾಷ್ಟ್ರೀಯ ರಂಗ ಸರಕಾರ ರಾಜೀವ ಗಾಂಧಿ ಸರಕಾರದಿಂದ ಪಡೆದ ಬಳುವಳಿಯಿದು. ಹೊಸ ಸರಕಾರ ಹೊರಡಿಸಿದ ಶ್ವೇತಪತ್ರ ಹಾಗೂ ಆರ್ಥಿಕ ಸರ್ವೇಕ್ಷಣೆ ಕೂಡಾ ಇದನ್ನು ಎತ್ತಿ ತೋರಿಸಿತು. ಆದ್ದರಿಂದ ಹೊಸ ಸರಕಾರ ಪರಿಸ್ಥಿತಿ ಹೀಗೆ ಹದಗೆಡುವಂತೆ ಮಾಡಿದ ಧೋರಣೆಗಳನ್ನು ಬದಲಿಸಬಹುದೆಂಬ ನಿರೀಕ್ಷೆಯಿತ್ತು. ದುರದೃಷ್ಟದಿಂದ ರಾಷ್ಟ್ರೀಯ ರಂಗ ಸರ್ಕಾರ ಹಳೆಯ ಜಾಡಿನಲ್ಲೇ ಮುಂದುವರೆಯುತ್ತಿದೆ.

ಆದರೆ ಒಂದು ತೃಪ್ತಿ ನೀಡುವ ಸಂಗತಿಯಿದೆ. ಹಿಂದಿನ ವರ್ಷಗಳಂತಲ್ಲದೆ ಈಗ ರಾಷ್ಟ್ರೀಯರಂಗ ಸರ್ಕಾರ ಎಡ ಶಕ್ತಿಗಳ ಪ್ರಭಾವಕ್ಕೆ ಲಕ್ಷ್ಯ ಕೊಡುವಂತಿದೆ. ರಾಷ್ಟ್ರೀಯವಾಗಿ ಒಪ್ಪಿಕೊಂಡ ಯೋಜನಾ ಗುರಿಗಳಿಗೆ ವಿರುದ್ಧವಾದ ನೆಹರೂ ಯೋಜನಾ ಮಾದರಿಯ ನಕಾರಾತ್ಮಕ ಅಂಶಗಳು ಮತ್ತು ಬೂರ್ಜ್ವಾ – ಭೂಮಾಲಿಕ ವರ್ಗ ಧೋರಣೆಗಳ ವಿರುದ್ಧ ಸತತ ಹೋರಾಟ ನಡೆಸಿರುವ ಎಡಶಕ್ತಿಗಳ ಸರಕಾರದ ಧೋರಣೆಗಳ, ನಿಲುವುಗಳ ನಕಾರಾತ್ಮಕ ಅಂಶಗಳ ವಿರುದ್ಧ ದನಿಯೆತ್ತಿದುದಷ್ಟೇ ಅಲ್ಲ, ಸ್ವತಂತ್ರವಾಗಿ ದುಡಿಯುವ ಜನಗಳನ್ನು ಅನುಸರಿಸಿ ಧೋರಣೆಗಳ ಬದಲಾವಣೆಗೆ ಒತ್ತಾಯ ತರುತ್ತಲೇ ಇದೆ. ಎಡಪಕ್ಷಗಳು ತಮ್ಮ ನೇತೃತ್ವದಲ್ಲಿರುವ ದುಡಿಯುವ ಜನಗಳ ಸಮರಧೀರ ಸಂಘಟನೆಗಳೊಂದಿಗೆ ಸಂಸತ್ತಿನಲ್ಲಿ ಹಾಗೂ ವಿಧಾನಮಂಡಲಗಳಲ್ಲೂ ಸರಕಾರದ ಧೋರಣೆಗಳನ್ನು ಎಡದತ್ತ ತಿರುಗಿಸಲು ಹೋರಾಡುತ್ತಿವೆ.

ಎಡಪಕ್ಷಗಳ ಈ ಹೋರಾಟ ರಾಷ್ಟ್ರೀಯ ರಂಗ ಮತ್ತು ಅದರ ಸರಕಾರದ ಮೇಲೆ ಪ್ರಭಾವ ಬೀರುವುದು ಖಂಡಿತ. ಏಕೆಂದರೆ ಧೋರಣೆಗಳ ಯಾವ ಪರಿವರ್ತನೆಗಾಗಿ ಎಡಪಕ್ಷಗಳು ಹೋರಾಡುತ್ತಾ ಬಂದಿದೆಯೋ ಅದು ನಮ್ಮ ಸ್ವಾತಂತ್ರ್ಯ ಆಂದೋಲನದ ಚೇತನಕ್ಕೆ ಅನುಗುಣವಾದ ಧೋರಣೆಗಳು.

ಕಾಂಗ್ರೆಸ್ಸಿನ 1931 ರ ಕರಾಚಿ ಅಧಿವೇಶನದ, 1937 ರ ಫೈಜ್‌ಪುರ ಅಧಿವೇಶನದ ಠರಾವುಗಳ, 1937 ರ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯ ಚಾರಿತ್ರಿಕ ದಸ್ತಾವೇಜುಗಳಲ್ಲಿ ಅಮರವಾದ ಹೋರಾಟದ ಚೇತನವದು. 1947 ರಲ್ಲಿ ಬ್ರಿಟಿಷರಿಂದ ಅಧಿಕಾರ ಪಡೆದ ಕಾಂಗ್ರೆಸ್ ಮುಖಂಡರು ಸ್ವಾತಂತ್ರ್ಯ ಆಂದೋಲನದ ಆ ಚೇತನವನ್ನು ಉಲ್ಲಂಘಿಸಿದುದರಿಂದ ಕಮ್ಯುನಿಸ್ಟರು ಮತ್ತು ಇತರ ತೀವ್ರಗಾಮಿ ಶಕ್ತಿಗಳು ಆ ಚೇತನವನ್ನು ಮುಂದುವರಿಸುವ ಹೊಣೆ ಹೊತ್ತರು. ಈಗ ರಾಷ್ಟ್ರೀಯ ರಂಗ ಸರಕಾರವೂ ಸುಮಾರಾ ಅವೇ ವರ್ಗಧೋರಣೆಗಳನ್ನು ಅನುಸರಿಸುತ್ತಿರುವಾಗಲೂ ಅದನ್ನೇ ಮತ್ತೆ ಮಾಡಬೇಕಾಗಿದೆ.

ಈ ಜವಾಬ್ದಾರಿ ನಿರ್ವಹಿಸುವಾಗ ಎಡಶಕ್ತಿಗಳು ಬಿ.ಜೆ.ಪಿ. ಯಂತಹ ಸಂಘಟನೆಗಳಲ್ಲಿ ಗಟ್ಟಿಯಾಗಿ ನಿಂತಿರುವ ಬಲ ಪ್ರತಿಗಾಮಿ ಶಕ್ತಿಗಳು ಮತ್ತು ಇತರ ವಿಚ್ಛಿದ್ರಕಾರಿ ಶಕ್ತಿಗಳ ವಿರುದ್ಧವೂ ಹೋರಾಡಬೇಕಾಗಿದೆ.

ಯಾಕೆಂದರೆ ಇವು ದೇಶದ ಪ್ರಜಾಸತ್ತಾತ್ಮಕ ಮತ್ತು ಜಾತ್ಯಾತೀತ ಐಕ್ಯತೆಯನ್ನು ಮುರಿಯಲು ಪ್ರಯತ್ನಿಸುವುದಷ್ಟೇ ಅಲ್ಲ, ಸಾಮಾಜಿಕ ಆರ್ಥಿಕ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಬೂರ್ಜ್ವಾ – ಭೂಮಾಲಿಕ ಧೋರಣೆಗಳನ್ನು ಅವು ಪ್ರತಿಪಾದಿಸುತ್ತವೆ. ಇದೇ ಎಲ್ಲಾ ಕಾಂಗ್ರೆಸ್ಸೇತರ ಜಾತ್ಯಾತೀತ ಶಕ್ತಿಗಳ ಐಕ್ಯತೆ ಬೆಳೆಯಲು ಎಡಶಕ್ತಿಗಳು ನಡೆಸಿರುವ ಹೋರಾಟದ ಮಹತ್ವ. ●



ಮುಖ್ಯಮಂತ್ರಿಗಳ ಸಭೆಯಲ್ಲಿ ಜ್ಯೋತಿ ಬಸು

"ನಿಜವಾದ ಪಂಚಾಯತಿ ರಾಜ್ಯತರಲು ಭೂ ಸುಧಾರಣೆಗಳು ಅತ್ಯಗತ್ಯ"

ಇದುವರೆಗೆ ರಾಷ್ಟ್ರೀಯ ಮಟ್ಟದಲ್ಲಿ ಅನುಸರಿಸಿ ಕೊಂಡು ಬಂದ ಯೋಜನಾ ನಿಲುವಿಗೆ ಪರ್ಯಾಯದ ಒಂದು ನಿಲುವು.ಜನ ಸಾಮಾನ್ಯರ ಸಂಕಷ್ಟಗಳಿಗೆ ಪರಿಹಾರ ನೀಡಬಲ್ಲ ನಿಲುವು ಅಗತ್ಯ ಎಂದು ಪಶ್ಚಿಮ ಬಂಗಾಳ ಎಡರಂಗ ಸರ್ಕಾರ ಹೇಳುತ್ತಾ ಬಂದಿದೆ. ಈ ಪರ್ಯಾಯ ಯೋಜನೆ ಭೂಸುಧಾರಣೆಗಳಿಂದ ಆರಂಭವಾಗಬೇಕು. ಏಕೆಂದರೆ ಈ ಮೂಲಕವೇ ಪರಿಹಾರ ಅತ್ಯಂತ ಅಗತ್ಯವಾಗಿರುವ ಜನವಿಭಾಗಗಳಿಗೆ, ಹರಿಜನ, ಗಿರಿಜನರಿಗೆ ಒದಗಿಸಲು ಸಾಧ್ಯ.. ತನ್ಮೂಲಕ ಜನ ಸಾಮಾನ್ಯರನ್ನು ಚುನಾಯಿತ ಪಂಚಾಯತುಗಳಲ್ಲಿ ಅಥವಾ ಪುರಸಭೆ, ನಗರ ಸಭೆಗಳ ಮೂಲಕ ಯೋಜನಾ ಪ್ರಕ್ರಿಯೆಯಲ್ಲಿ ಒಳಗೊಳ್ಳುವುದು ಸಾಧ್ಯ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿ ಬಸುರವರು ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಮುಖ್ಯಮಂತ್ರಿಗಳ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು.

ಪಶ್ಚಿಮ ಬಂಗಾಳದ ಅನುಭವವನ್ನು ವಿವರಿಸುತ್ತಾ ಅವರು 1960 ರ ದಶಕದಲ್ಲಿ ಸಂಯುಕ್ತ ರಂಗ ಸರಕಾರ ಅಧಿಕಾರಕ್ಕೆ ಬಂದಾಗ ಆರಂಭಗೊಂಡ ಭೂಸುಧಾರಣಾ ಪ್ರಯತ್ನಗಳಿಂದಾಗಿ 1978 ರ ಹೊತ್ತಿಗೆ ಬಹುಪಾಲು ಭೂಸುಧಾರಣಾ ಕ್ರಮಗಳು ಜ್ಯಾರಿಗೆ ಬಂದಿದ್ದವು. ರಾಷ್ಟ್ರೀಯ ಅಂಕೆ ಸಂಖ್ಯೆಗಳ ಪ್ರಕಾರ ಇಡೀ ದೇಶದಲ್ಲಿ ಸಣ್ಣ ಹಾಗೂ ಅಂಚಿನಲ್ಲಿರುವ ರೈತರು ಕೇವಲ 29% ಜಮೀನು ಹೊಂದಿದ್ದರೆ ಪ. ಬಂಗಾಳದಲ್ಲಿ ಈ ಸಂಖ್ಯೆ 60%ದಷ್ಟಾಯಿತು. (ಆಪರೇಶನ್ ಬಾರ್ಗಾದ ನಂತರ ಇದು 70% ದಷ್ಟಾಗಿದೆ). ಈ ಹಿನ್ನೆಲೆಯಲ್ಲಿ ಎಡರಂಗ ಅಧಿಕಾರಕ್ಕೆ ಬರುವ ಮೊದಲು 15 ವರ್ಷ ನಡೆಯದಿದ್ದ ಚುನಾವಣೆ 1978 ರಲ್ಲಿ ನಡೆಯಿತು. ನಂತರ ನಿಯಮಿತವಾಗಿ 1983 ಹಾಗೂ 1988 ರಲ್ಲಿ ನಡೆಯಿತು. ಈಗ ರಾಜ್ಯದಲ್ಲಿ 3227 ಚುನಾಯಿತ ಗ್ರಾಮ ಪಂಚಾಯತುಗಳು, 329 ಪಂಚಾಯತು ಸಮಿತಿಗಳು ಮತ್ತು 15 ಜಿಲ್ಲಾ ಪರಿಷತ್ತುಗಳಿವೆ. ಈ ಸಂಸ್ಥೆಗಳ ಸದಸ್ಯರಲ್ಲಿ 85% ಸಣ್ಣ ರೈತರು ಮತ್ತು ಅದಕ್ಕೂ ಕೆಳಗಿನ ವಿಭಾಗಗಳಿಂದ ಬಂದವರು. ಇಂತಹ ಬಡಜನ ಪರ ಸ್ವಭಾವವುಳ್ಳ ಪಂಚಾಯತುಗಳಿಗೆ ಯೋಜನೆಯ ಮತ್ತು ಅಭಿವೃದ್ಧಿ ಕಾಮಗಾರಿಗಳ ಜ್ಯಾರಿಯ ಜವಾಬ್ದಾರಿ ಒಪ್ಪಿಸಲಾಯಿತು. ತಮ್ಮ ಬಡಜನ-ಪರ ಸ್ವಭಾವದಿಂದಾಗಿ, ಪಂಚಾಯತುಗಳಲ್ಲಿ ಸೇರ ತೊಡಗು ವಿಕೆಯಿಂದಾಗಿ ವಿವಿಧ ಯೋಜನೆಗಳ ಜ್ಯಾರಿಯಲ್ಲಿ ವಿಶಿಷ್ಟ ಉತ್ಸಾಹ ಕಂಡು ಬಂತು. ವಿವಿಧ ಯೋಜನೆಗಳಡಿ ಸಂಯೋಗ ಫಲಾನುಭವಿಗಳನ್ನು ಗುರುತಿಸುವಲ್ಲಿ ಆದ ತಪ್ಪುಗಳು ಬಹಳ ಕಮ್ಮಿ ಹಾಗೂ ಅಭಿವೃದ್ಧಿ ಕಾಮಗಾರಿಗಳ ವೆಚ್ಚವೂ ಕಡಿಮೆಯಾಯಿತು ಎಂದ ಜ್ಯೋತಿ ಬಸುರವರು ಇದರಿಂದಾಗಿ ಆರು ವರ್ಷಗಳ ಹಿಂದೆ ವಿಕೇಂದ್ರೀಕೃತ ಯೋಜನಾ ಪ್ರಕ್ರಿಯೆಯು ಒಂದು ಹೊಸ ಹೆಜ್ಜೆ ಇಡಲು ಸಾಧ್ಯವಾಯಿತು ಎಂಬ ಸಾಧನೆಯತ್ತ ಗಮನ ಸೆಳೆದರು.

ಹೀಗೆ ಭೂಸುಧಾರಣೆ, ಪಂಚಾಯತೀ ರಾಜ್ಯದ ಗುರಿ ಸಾಧನೆ ಹಾಗೂ ಜನ-ಪರ ಯೋಜನಾ ಪ್ರಕ್ರಿಯೆ ಇವುಗಳ ನಡುವಿನ ಪರಸ್ಪರ ಸಂಬಂಧಗಳನ್ನು ಪಶ್ಚಿಮ ಬಂಗಾಳದ ಅನುಭವಗಳ ಮೂಲಕ ಕಾಂ. ಜ್ಯೋತಿ ಬಸು ವಿವರಿಸಿದರು. ವಿಕೇಂದ್ರೀಕರಣ ಯಾವಾಗ ಯಶಸ್ವಿಯಾಗುತ್ತದೆ? ಗ್ರಾಮೀಣ ಜನ ಸಾಮಾನ್ಯರನ್ನು ಅದರಲ್ಲಿ ತೊಡಗಿಸಿದಾಗ ಯೋಜನಾ ಪ್ರಕ್ರಿಯೆಯಲ್ಲಿ ಗ್ರಾಮೀಣ ಜನ ಸಾಮಾನ್ಯರನ್ನು ಹೇಗೆ ತೊಡಗಿಸುವುದು? ಪಂಚಾಯತುಗಳ ಮೂಲಕ ಜನ ಉತ್ಸಾಹದಿಂದ ಯಾವಾಗ ಭಾಗವಹಿಸುತ್ತಾರೆ? ಯೋಜನಾ ಆದ್ಯತೆಗಳು ತಮ್ಮ ಪರವಾಗಿದೆಯೆಂದು ಕಂಡಾಗ ಜಮೀನಿನ ಹತೋಟಿ, ಗ್ರಾಮೀಣ ಆರ್ಥಿಕದ ಹತೋಟಿ ಗ್ರಾಮೀಣ ಪಟ್ಟಭದ್ರ ಹಿತಾಸಕ್ತಿಗಳ ಕೈಯಲ್ಲಿದ್ದರೆ ಅವರು ಏಕೆ ಕೇವಲ ಹಿಡಿಯಷ್ಟು ಸಿರಿವಂತರಿಗೆ ಪ್ರಯೋಜನ ತರಬಹುದಾದ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುತ್ತಾರೆ?

ಈ ಸಭೆಯಲ್ಲಿ ಪಂಚಾಯತೀ ರಾಜ್ಯದ ಬಗ್ಗೆ ಕೆಲವು ಮಾರ್ಗದರ್ಶನ ಸೂತ್ರಗಳನ್ನು ಮಂಡಿಸಲಾಗಿತ್ತು. ಈ ಬಗ್ಗೆ ಮಾತನಾಡುತ್ತಾ ಆರಂಭದಲ್ಲೇ ಜ್ಯೋತಿ ಬಸು ಸ್ಪಷ್ಟಪಡಿಸಿದರು. ಈ ವಿಷಯಗಳು ಪ್ರಥಮತಃ ರಾಜ್ಯ ಪಟ್ಟಿಯ ವಿಷಯಗಳು. ಆದ್ದರಿಂದ ರಾಜ್ಯಗಳ ಮತ್ತು ಕೇಂದ್ರದ ನಡುವೆ ಪರಸ್ಪ[illegible] ಬಿಚ್ಚು ಮನಸ್ಸಿನ ವಿಚಾರ ವಿನಿಮಯ ನಡೆದು ಕೆಲವು ಸರ್ವಸಾಮಾನ್ಯ ಆಧಾ[illegible]ಗಳನ್ನು ಕುರಿತು ಒಮ್ಮತಕ್ಕೆ ಬರಲು ಪ್ರಯತ್ನಿಸುವುದು ಇಂತಹ ಸಭೆಯ ಗುರಿಯಾಗಬೇಕು ಎಂದರು.ಈ ಒಮ್ಮ[illegible]ದಲ್ಲಿ ಆಯಾಯ ರಾಜ್ಯಗಳ ವಿಶಿಷ್ಟ ಪರಿಸ್ಥಿತಿಗಳಿಗೆ ಅನುಗುಣವಾಗಿ ರೂ[illegible]ಸುವ ಅವಕಾಶವೂ ಇರಬೇಕು. ಇದ[illegible] ಹಿಂದಿನ ಕೇಂದ್ರೀಕೃತ ಯೋಜನೆಯ ಪ್ರವೃತ್ತಿಗಿಂತ, ಹೇರುವ ಪ್ರವೃತ್ತಿಗಿಂ[illegible] ಭಿನ್ನವಾದ ಸ್ವಾಗತಾರ್ಹ ಹೆಜ್ಜೆಯಾಗುತ್ತ[illegible] ಎಂದು ಜ್ಯೋತಿ ಬಸು ಹೇಳಿದರು.

ಈಗಿರುವ ಸಂವಿಧಾನದ ಕಲಮುಗ[illegible] ಚೌಕಟ್ಟಿನಲ್ಲೇ ಕಳೆದ 13 ವರ್ಷಗಳಿಂ[illegible] ಒಂದು ಜೀವಂತ ಪಂಚಾಯತು ವ್ಯವ[illegible] ಪಶ್ಚಿಮ ಬಂಗಾಳದಲ್ಲಿ ಕಾರ್ಯನಿವ[illegible]ಹಿಸುತ್ತಿರುವುದನ್ನು ಕಂಡಾಗ ಇದ[illegible] ಬೇಕಾದುದು ನಿಜವಾದ ರಾಜಕೀಯ ಇಚ್ಛೆಯಷ್ಟೆ ಎಂದರು. ಬೇರೆ ಕೆಲ[illegible] ರಾಜ್ಯಗಳ ಉದಾಹರಣೆಗಳೂ ಇದನ[illegible] ತೋರಿಸಿಕೊಟ್ಟಿವೆ ಎಂದರು. ಈ[illegible] ಬದಲಾದ ಸನ್ನಿವೇಶದಲ್ಲಿ ಹಿಂದಿ[illegible] ಸರಕಾರದ ಮೇಲಿನಿಂದ ಸಂವಿಧಾ[illegible] ತಿದ್ದುಪಡಿ ಮೂಲಕ ಹೇರುವ ನಿಲು[illegible] ಬಿಟ್ಟು ರಾಜ್ಯಗಳನ್ನು ವಿಶ್ವಾಸ[illegible] ತಗೊಳ್ಳುವ ಒಂದು ಭಿನ್ನ ಕ್ರಮ[illegible] ಅನುಸರಿಸಬೇಕೆಂದು ಸಲಹೆಮಾಡಿದರು.

ಎಡ ಶಕ್ತಿಗಳ ಈ ಹೋರಾಟ ರಾಷ್ಟ್ರೀಯ ರಂಗ ಸರಕಾರದ ಮೇಲೆ ಪ್ರಭಾವ ಬೀರುವುದು ಖಂಡಿತ. ಏಕೆಂದರೆ ಧೋರಣೆಗಳ ಯಾವ ಪರಿವರ್ತನೆಗಾಗಿ ಅವು ಹೋರಾಡುತ್ತಾ ಬಂದಿವೆಯೋ ಅವು ನಮ್ಮ ಸ್ವಾತಂತ್ರ್ಯ ಆಂದೋಲನದ ಚೇತನವನ್ನು ಉಳಿಸಿ, ಬೆಳೆಸುವ ಜನಪರ ಧೋರಣೆಗಳಿಗಾಗಿ ನಡೆಸಿದ ಹೋರಾಟ. 1947 ರಲ್ಲಿ ಅಧಿಕಾರ ಪಡೆದ ಕಾಂಗ್ರೆಸ್ ಮುಖಂಡರು ಅದನ್ನು ಉಲ್ಲಂಘಿಸಿದ್ದರು.

ಭೂಸುಧಾರಣೆಯ ಬಗ್ಗೆ ಗೋಸುಂಬೆತನ

ಕಾಂಗ್ರೆ. ಬಿ.ಜೆ.ಪಿ. ಮತ್ತು ರಾಷ್ಟ್ರೀಯ ರಂಗದ ಕೆಲವು ಮುಖ್ಯಮಂತ್ರಿಗಳು ಸಾರ್ವಜನಿಕವಾಗಿ ಭೂಸುಧಾರಣಾ ಪರ ನಿಲುವು ತೋರಿಸಿ ಕೊಂಡರೂ ವಾಸ್ತವದಲ್ಲಿ ಅವರು ಭೂಸುಧಾರಣಾ ವಿರೋಧಿಗಳು ಎಂದು ಮುಖ್ಯಮಂತ್ರಿಗಳ ಇತ್ತೀಚಿನ ಸಭೆಯಲ್ಲಿ ಕಂಡು ಬಂತು ಎಂಬುದಾಗಿ ಪತ್ರಿಕಾ ವರದಿಗಳು ತಿಳಿಸಿವೆ.

ಪಂಜಾಬಿನ ಪರವಾಗಿ ಭಾಗವಹಿಸಿದ ಅಲ್ಲಿನ ಹೊಸ ರಾಜ್ಯಪಾಲ ವೀರೇಂದ್ರ ವರ್ಮಾ ಭೂಸುಧಾರಣೆಗಳು ಅನಗತ್ಯ, ವಾಸ್ತವತೆಯ ಅರಿವಿಲ್ಲದ ಅಧಿಕಾರಿಗಳಷ್ಟೇ ಇದಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ಆರಂಭಿಸಿದರಂತೆ. ಆಶ್ಚರ್ಯವೆಂದರೆ ಇನ್ನೂ ಹಲವಾರು ಮುಖ್ಯ ಮಂತ್ರಿಗಳು ತಮ್ಮ ಸಿದ್ಧಪಡಿಸಿದ ಭಾಷಣಗಳು ಭೂಸುಧಾರಣಾ ಪರವಿದ್ದರೂ ತಮ್ಮ ಮುದ್ರಿತ ಭಾಷಣಗಳ ಅಂಶಕ್ಕೇ ವಿರುದ್ಧವಾಗಿ ಮಾತನಾಡಿ ಭೂಸುಧಾರಣಾ ಶಾಸನಗಳ ಉಲ್ಲಂಘನೆ ಮಾಡುವವರಿಗೆ ರಕ್ಷಣೆಯೇ ತಮ್ಮ ನಿಜವಾದ ಆಸಕ್ತಿಯೆಂದು ತೋರಿಸಿಕೊಟ್ಟರು ಎಂದು ಟೈಂಸ್ ಆಫ್ ಇಂಡಿಯಾ (ದಿನಾಂಕ 17.6.90) ವರದಿ ಮಾಡಿದೆ.

ಮಹಾರಾಷ್ಟ್ರದಲ್ಲಿ ಭೂಸುಧಾರಣೆ ಬಗ್ಗೆ ಮಾಡಬಹುದಾದದ್ದು ಏನೂ ಇಲ್ಲ ಎಂದರು ಕಾಂಗ್ರೆ ಮುಖ್ಯಮಂತ್ರಿ ಶರದ್ ಪವಾರ್. 'ಗೈರು ಹಾಜರಿ ಭೂಮಾಲಕತ್ವ'ವನ್ನು ಸಮರ್ಥಿಸಿಕೊಂಡರು ಬಿ.ಜೆ.ಪಿ. ಮುಖ್ಯಮಂತ್ರಿ ಸುಂದರಲಾಲ್ ಪಟ್ವಾ. ಗುಜರಾತಿನ ಜನತಾದಳ-ಬಿ.ಜೆ.ಪಿ. ಸಮ್ಮಿಶ್ರ ಸರಕಾರದ ಮುಖ್ಯಮಂತ್ರಿ ಚಿಮಣ್‌ಭಾಯೀ ಪಟೇಲ್ ವೈಯಕ್ತಿಕ ಕೃಷಿಯ ನಿರ್ವಚನೆಯನ್ನು ಬದಲಿಸಿ ಭೂಸುಧಾರಣಾ ಶಾಸನಗಳ ಉಲ್ಲಂಘನೆಗೆ ಅವಕಾಶ ಮಾಡಿಕೊಡುವ ತನ್ನ ಉದ್ದೇಶವನ್ನು ಹೊರಗೆಡಹಿದರು.

ಆದರೆ ಮುಖ್ಯಮಂತ್ರಿಗಳು 'ವಿಶೇಷವಾಗಿ ಜ್ಯೋತಿ ಬಸು ಮತ್ತು ಪ ಬಂಗಾಳದ ರೆವಿನ್ಯೂ ಮಂತ್ರಿ ಬಿನಯ ಚೌಧುರಿ ಮಾತ್ರ ನಿರೀಕ್ಷಿಸಿದಂ[illegible] ಭೂಸುಧಾರಣೆಗಳ ಪರವಾಗಿದ್ದರು. ಗವ[illegible] ನಾರ್ ಅಂತವೆಂದರೆ ಉತ್ತರ ಪ್ರದೇಶ[illegible] ಮುಖ್ಯಮಂತ್ರಿ ಕೂಡಾ ಭೂಸುಧಾರಣೆಗ[illegible] ಬಗ್ಗೆ ಸಕಾರಾತ್ಮಕ ನಿಲುವು ತಳೆದರು. ಬಿಹಾರದ ಮುಖ್ಯಮಂತ್ರಿ ಕೂಡಾ ಭೂಸುಧಾರಣೆಗಳನ್ನು ಬೆಂಬಲಿಸುತ್ತಾ ಬ[illegible] ಜನ ಪರ ಕಾನೂನುಗಳನ್ನು ಜ್ಯಾರಿ ಮಾ[illegible]ಲಾಗದ ಮುಖ್ಯ ಮಂತ್ರಿಗಳು ರಾ[illegible]ನಾಮೆ ನೀಡಿ ಎಂದು ತಮ್ಮ ಟೀಕನ್ನು ವ್ಯಕ್ತಪಡಿಸಿದರೆಂದು ಈ ವರದಿ ತಿಳಿಸಿದೆ.

ಉಪಪ್ರಧಾನಿ ದೇವಿಲಾಲ್ ಕೂಡಾ ತಮ್ಮ 'ಇಲಾಖೆ ತಯಾರಿಸಿದ ಭೂಸುಧಾರಣೆ ಪರ ಟಿಪ್ಪಣಿಗಳನ್ನು ಬದಿಗೊತ್ತಿ ಮಾತನಾಡಿದರು. ಪ್ರಧಾನ ಮಂತ್ರಿಗಳೂ ಈ ಅಂಶಗಳ ಬಗ್ಗೆ ಮಾತನಾಡದೆ 'ಶ್ರೀಮಂತಿಕೆಯ ರೇಖೆ'ಯ ಬಗ್ಗೆ ಮಾತನಾಡಿದರು ಎಂದು ವರದಿ ತಿಳಿಸಿದೆ.

ಬಂತಾಲಾದಲ್ಲಿ ಜಘನ್ಯ ಕೃತ್ಯ: ನ್ಯಾಯಾಂಗ ತನಿಖೆ

ಪಶ್ಚಿಮ ಬಂಗಾಳದ ದಕ್ಷಿಣ 24 ಪರಗಣ ಜಿಲ್ಲೆಯ ಬಂತಾಲಾದಲ್ಲಿ ಮೇ 30 ರಂದು ಸಾಯಂಕಾಲ 7.30 ರ ಸುಮಾರಿಗೆ ಒಂದು ಜನ ಜಂಗುಳಿ ಆರೋಗ್ಯ ಇಲಾಖೆಯ ಇಬ್ಬರು ಮಹಿಳಾ ಅಧಿಕಾರಿಗಳು ಮತ್ತು ಯುನಿಸೆಫ್‌ನ ಇಬ್ಬರು ಅಧಿಕಾರಿಯಿದ್ದ ವ್ಯಾನಿನ ಮೇಲೆ ಅಮಾನುಷ ಹಲ್ಲೆ ನಡೆಸಿದರು. ಇಬ್ಬರು ಮಹಿಳಾ ಅಧಿಕಾರಿಗಳು ಮತ್ತು ಡ್ರೈವರ್ ಈ ಹಲ್ಲೆಗೆ ಬಲಿಯಾದರು. ಇದೊಂದು ಅತ್ಯಂತ ಬರ್ಬರ, ನಾಚಿಕೆಯ ಅಮಾನವೀಯ ಕೃತ್ಯ ಎಂದು ವರ್ಣಿಸಿರುವ ಪಶ್ಚಿಮ ಬಂಗಾಳ ರಾಜ್ಯ ಸರಕಾರ ನೀಡಿರುವ ಹೇಳಿಕೆ ಎಲ್ಲರೂ ತೀವ್ರವಾಗಿ ಖಂಡಿಸ ಬೇಕಾದ ಜಘನ್ಯ ಘಟನೆಯಿದು ಎಂದಿದೆ. ತನಿಖಾ ಆಯೋಗ ಶಾಸನದ ಪ್ರಕಾರ ನ್ಯಾಯಾಂಗ ತನಿಖೆ ಆರಂಭವಾಗಿದೆ.

ಈ ಘಟನೆಯ ಕೆಲವು ದಿನಗಳ ಹಿಂದೆ ಮಕ್ಕಳ ಅಪಹರಣಕಾರರು ಬಂದಿದ್ದಾರೆಂಬ ಪುಕಾರು ಈ ಪ್ರದೇಶದಲ್ಲಿ ಹಬ್ಬಿತ್ತು. ಮೇ 30 ರಂದು ಈ ದುರದೃಷ್ಟ ಮಹಿಳೆಯರಿದ್ದ ವ್ಯಾನ್ ಬಂತಾಲಾ ...ಯ್ಪೂರ್‌ನಿಂದ ಹಾದು ಹೋಗುವಾಗ ಕೆಲವು ಸಮಾಜ ಘಾತುಕ ಶಕ್ತಿಗಳ ನೇತೃತ್ವದಲ್ಲಿ ಒಂದು ಗುಂಪು ಹಲ್ಲೆ ಮಾಡಲು ಪ್ರಯತ್ನಿಸಿದಾಗ ಅವರಿಂದ ತಪ್ಪಿಸಿಕೊಳ್ಳಲು ಡ್ರೈವರ್ ವೇಗವಾಗಿ ಗಾಡಿಯನ್ನು ಮುಂದೊಯ್ದಾಗ ಒಂದು ತಿರುವಿನಲ್ಲಿ ತಲೆ ಕೆಳಗಾಯಿತು. ಗುಂಪು ವ್ಯಾನಿಗೆ ಬೆಂಕಿ ಹಚ್ಚಿ ಜಘನ್ಯ ಕೃತ್ಯ ಎಸಗಿತು.

ಈಗಾಗಲೇ ಐವರನ್ನು ಬಂಧಿಸಲಾಗಿದೆ. ಹಲ್ಲೆಕೋರರು ಸ್ಥಳೀಯ ಸಮಾಜ-ವಿರೋಧಿ ವ್ಯಕ್ತಿಗಳು. ಇವರಿಗೆ ಯಾವ ರಾಜಕೀಯ ಶಕ್ತಿಯ ಬೆಂಬಲವಿದ್ದಂತೆ ಕಾಣುವುದಿಲ್ಲ ಎಂದು ಕಂಡು ಬಂದಿದೆ ಎಂಬುದಾಗಿ ಸರಕಾರೀ ಹೇಳಿಕೆ ತಿಳಿಸಿದೆ.

ಹೈದರಾಬಾದಿನಲ್ಲಿ ಬೃಹತ್ ರ್ಯಾಲಿ

ಜೂನ್ 7 ಸಿ.ಪಿ.ಐ.(ಎಂ) ಕರೆಯ ಮೇರೆಗೆ ಒಂದು ಲಕ್ಷಕ್ಕೂ ಹೆಚ್ಚು ಮಂದಿ ಆಂಧ್ರಪ್ರದೇಶದ ರಾಜಧಾನಿ ಹೈದರಾಬಾದಿಗೆ ಬಂದು ರಾಜ್ಯದಲ್ಲಿ ಕೆಡುಗೆಡುತ್ತಿರುವ ಕಾನೂನು ಮತ್ತು ವ್ಯವಸ್ಥೆಯ ಸ್ಥಿತಿಯ ಬಗ್ಗೆ ತಮ್ಮ ತೀವ್ರ ಪ್ರತಿಭಟನೆ ವ್ಯಕ್ತಪಡಿಸಿದರು.

ಇತ್ತೀಚಿನ ಚಂಡ ಮಾರುತದಿಂದ ಬಹಳಷ್ಟು ಜೀವಹಾನಿ, ಆಸ್ತಿ-ಪಾಸ್ತಿ ನಷ್ಟವಾಗಿ ಜನ ಸಂಕಷ್ಟದಲ್ಲಿದ್ದರೂ ರಾಜ್ಯದ ಎಲ್ಲಾ ಮೂಲೆಗಳಿಂದ ಬಂದ ಈ ಜನ ರ್ಯಾಲಿಯಲ್ಲಿ ಭಾಗವಹಿಸಿದರು. ಧಾರಾಕಾರ ಸುರಿಯುತ್ತಿದ್ದ ಮಳೆಯನ್ನು ಲೆಕ್ಕಿಸದೆ ಅವರು ರಾಜ್ಯ ಸರ್ಕಾರ ತನ್ನ ನಿರ್ಲಕ್ಷ್ಯದ, ಬೇಜವಾಬ್ದಾರಿಯ, ಕೆಲವೊಮ್ಮೆ ಗೂಂಡಾ ಶಕ್ತಿಗಳೊಡನೆ ಶಾಮೀಲಾಗುವ ಧೋರಣೆಯ ದುಷ್ಫಲಗಳನ್ನು ಅರಿತು ಅದನ್ನು ಬದಲಿಸಬೇಕೆಂದು ಒತ್ತಾಯಿಸಿದರು.

ಕಾಂಗ್ರೆಸ್ ಧೋರಣೆಗಳನ್ನು ತ್ಯಜಿಸಬೇಕೆಂದು ಒತ್ತಾಯಿಸಿದ ಭುವನೇಶ್ವರ ರ್ಯಾಲಿ

ಒರಿಸ್ಸಾದ ವಿವಿಧ ಪ್ರದೇಶಗಳಿಂದ ಬಂದ ಹತ್ತು ಸಾವಿರ ಕಾರ್ಮಿಕರು ಜೂನ್ 1 ರಂದು ವಿಧಾನ ಸಭೆಯ ಎದುರು ಬೃಹತ್ ಮತ ಪ್ರದರ್ಶನ ನಡೆಸಿದರು. ಅಂದು ವಿಧಾನ ಮಂಡಲದ ಬಜೆಟ್ ಅಧಿವೇಶನದ ಮೊದಲ ದಿನವಾಗಿತ್ತು. ಸಿ.ಐ.ಟಿ.ಯು. ನೇತೃತ್ವದಲ್ಲಿ ನಡೆದ ಈ ರ್ಯಾಲಿಯ ಉದ್ದೇಶ ಮುಖ್ಯ ಮಂತ್ರಿಗಳಿಗೆ ರಾಜ್ಯದ ಬಡ, ಅಸಂಘಟಿತ ಕಾರ್ಮಿಕರ

ದೇಶದೊಳಗೊಂದು ಸುತ್ತು

ಆರು ಅಂಶದ ಬೇಡಿಕೆಗಳನ್ನು ನೆನಪಿಸುವುದು. ಸರಕಾರವೇ ಘೋಷಿಸಿದ 25 ರೂ. ಕನಿಷ್ಠ ದಿನ ಗೂಲಿಯ ಜ್ಯಾರಿ, ಬೆಲೆಯೇರಿಕೆ ವಿರುದ್ಧ ಕ್ರಮ, ಜನಪರ ಬಜೆಟ್ ಮಂಡನೆ, ಕೆಲಸದ ಹಕ್ಕನ್ನು ಮೂಲಭೂತ ಹಕ್ಕಾಗಿಸಬೇಕು, ನಿರುದ್ಯೋಗಿ ಭತ್ಯೆ, ಕೃಷಿ ಉತ್ಪಾದನೆಗಳಿಗೆ ಪ್ರತಿಫಲಕಾರೀ ಬೆಲೆ ಹಾಗೂ ಕಾರ್ಮಿಕ ಪರ ಕೈಗಾರಿಕಾ ಶಾಸನಗಳನ್ನು ರೂಪಿಸ ಬೇಕು ಇದೇ ಅವರ ಆರು ಬೇಡಿಕೆಗಳು.

ರಾಜ್ಯದ ಗಣಿ ಮತ್ತು ಅರಣ್ಯ ಪ್ಲಾಂಟೇಶನ್ ಯೂನಿಯನ್‌ಗಳಲ್ಲಿ ಸಂಘಟಿತರಾದ ಕಾರ್ಮಿಕರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಘಟಕಗಳ ಅಸಂಘಟಿತ ವಲಯದ ಕಾರ್ಮಿಕರು, ಉಕ್ಕು, ಸಿಮೆಂಟ್, ಬಂದರು ಕಾರ್ಮಿಕರು ಈ ರ್ಯಾಲಿಯ ಮೊದಲು ನಡೆದ ಬೃಹತ್ ಮೆರವಣಿಗೆಯಲ್ಲಿ ಪಾಲುಗೊಂಡಿದ್ದರು.

ಈ ರ್ಯಾಲಿ ಅರ್ಪಿಸಿದ ಮನವಿಯಲ್ಲಿ ರಾಜ್ಯ ಸರಕಾರ ಜನರ ಕೆಲವು ತಕ್ಷಣದ ಬೇಡಿಕೆಗಳನ್ನು ಈಡೇರಿಸುವ ಕೆಲವು ಕ್ರಮಗಳಿಗಾಗಿ ಅದನ್ನು ಅಭಿನಂದಿಸುತ್ತಾ ಇವಕ್ಕೆ ಪೂರಕವಾಗಿ ಕ್ರಮಗಳನ್ನು ಕೈಗೊಳ್ಳದಿದ್ದರೆ ಇವುಗಳ ನಿಜವಾದ ಪ್ರಯೋಜನ ದುಡಿಯುವ ಜನರಿಗೆ ಸಿಗಲಾರದು. ಆದ್ದರಿಂದ ಕಾಂಗ್ರೆಸ್(ಐ) ಅಂತಹ ಪರಿಸ್ಥಿತಿಯ ಪ್ರಯೋಜನ ಪಡೆಯದಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಲಾಗಿದೆ.

ಹೊಸ ರಾಜ್ಯ ಸರಕಾರ 25 ರೂ. ಕನಿಷ್ಠ ದಿನಗೂಲಿಯ ಸಲಹೆ ನೀಡಿದಾಗ ರಾಜ್ಯದ ಭೂಮಾಲಕ ಲಾಬಿಗಳು, ಮಾಲೀಕರ ಗುಂಪುಗಳು ಇದರ ವಿರುದ್ಧ ಅಪಪ್ರಚಾರದ ಅಬ್ಬರ್ ಹರಿಯ ಬಿಟ್ಟರು. ವಾಸ್ತವವಾಗಿ ರಾಜ್ಯದಲ್ಲಿನ ಈಗಿನ ಕೂಲಿ ಪರಿಸ್ಥಿತಿ ಇತರ ಎಷ್ಟೋ ರಾಜ್ಯಗಳಿಗಿಂತ ಹೀನಾಯವಾಗಿದೆ ಎಂಬುದನ್ನೂ ಮರೆ ಮಾಡುವ ಪ್ರಯತ್ನ ನಡೆದಿದೆ. ಆದ್ದರಿಂದ ರಾಜ್ಯ ಸರಕಾರ ಈ ಅಬ್ಬರಕ್ಕೆ ಮಣಿಯದೆ ತಾನೇ ಸೂಚಿಸಿದ ಕನಿಷ್ಠ ಕೂಲಿಯನ್ನು ಜ್ಯಾರಿಗೆ ತರಬೇಕೆಂದು ಕಾರ್ಮಿಕರು ಒತ್ತಾಯಿಸಿದರು. ಜನತಾದಳ, ಸಿ.ಪಿ.ಐ(ಎಂ), ಸಿ.ಪಿ.ಐ. ನ ಚುನಾವಣಾ ಪ್ರಣಾಳಿಕೆ'ಗಳಲ್ಲಿ ಹೇಳಿದ ಜನಪ್ರಿಯ ಕ್ರಮಗಳ ಜ್ಯಾರಿಗೆ, ರಾಜ್ಯದ ದಶಕಗಳ ಹಿಂದುಳಿಕೆ ನಿವಾರಿಕೆಯ ಕ್ರಮಗಳ ಜ್ಯಾರಿಗೆ ಜನ ಪರ ಬಜೆಟ್ ರೂಪಿಸುವುದು ಅಗತ್ಯ ಎಂದೂ ರ್ಯಾಲಿ ಒತ್ತಾಯಿಸಿತು.

ರಾಜ್ಯ ಮುಖ್ಯಮಂತ್ರಿಗಳಿಗೆ ಸಿ.ಐ.ಟಿ.ಯು. ನಿಯೋಗದೊಂದಿಗೆ ಈ ಬೇಡಿಕೆಗಳನ್ನು ಚರ್ಚಿಸಲು ಪುರುಸೊತ್ತಾಗದುದನ್ನು ರ್ಯಾಲಿ ಬಲವಾಗಿ ಖಂಡಿಸಿತು. ಕಾರ್ಮಿಕರು ತಮ್ಮ ಮತ್ತು ಕಾರ್ಮಿಕರ ಬೇಡಿಕೆಗಳ ಬಗ್ಗೆ ಜಾಗರೂಕರಾಗಿರಬೇಕು, ಹೋರಾಟ ಮುಂದು ವರೆಸಲು ಸಿದ್ಧರಿರಬೇಕು ಎಂದು ರ್ಯಾಲಿ ಕರೆ ನೀಡಿತು. ಕೇವಲ ಜನಪ್ರಿಯತೆ ಗಿಟ್ಟಿಸುವ ಕಾರ್ಯಕ್ರಮಗಳನ್ನು ಘೋಷಣೆ ಮಾಡಿದರೆ ಸಾಲದು. ಅದರಿಂದ ಪರಿಸ್ಥಿತಿ ಸುಧಾರಿಸುವುದಿಲ್ಲ. ತಾನು ಕೊಟ್ಟ ಭರವಸೆಗಳನ್ನು ಜ್ಯಾರಿಗೊಳಿಸುವುದಕ್ಕೆ ಸರಕಾರ ಆದ್ಯತೆ ನೀಡಬೇಕು ಎಂದು ರ್ಯಾಲಿ ಎಚ್ಚರಿಸಿತು.



ಹೈದರಾಬಾದ್ ರ್ಯಾಲಿ — ವೇದಿಕೆಯ ಮೇಲೆ ಇ.ಎಂ.ಎಸ್. ಎಂ.ಬಸವಪುನ್ನಯ್ಯ ಹಾಗೂ ಎಂ. ಹನುಮಂತರಾವ್.


ಭಜರಂಗ ದಳದ ಹಲ್ಲೆ ಪಿ.ಬಿ. ಖಂಡನೆ

ಕಾನಪುರದಲ್ಲಿ ಸ್ಥಳೀಯ ಸಮಸ್ಯೆಗಳನ್ನು ಕುರಿತು ಜೂನ್ 6 ರಂದು ಸ್ಥಳೀಯ ನ್ಯಾಯಾಲಯದ ಎದುರು ಧರಣಿ ಕುಳಿತಿದ್ದ ಸಿ.ಐ.ಟಿ.ಯು. ಕಾರ್ಯಕರ್ತರ ಮೇಲೆ ಭಜರಂಗ ದಳದವರು ಹಲ್ಲೆ ನಡೆಸಿದರು. ಸಿ.ಐ.ಟಿ.ಯು. ಮುಖಂಡ ಅರವಿಂದ ಕುಮಾರ್ ಇತರ ಕಾರ್ಮಿಕರ ತುರ್ತು ಕ್ರಮಗಳಿಂದಾಗಿ ಗಂಭೀರ ಜಖಂನಿಂದ ಪಾರಾದರು. ಭಜರಂಗ ದಳದ ಮೆರವಣಿಗೆಯೆಂದು ಧರಣಿ ಕೂತ ಜಾಗದ ಎದುರಿಂದ ಹಾದುಹೋದಾಗ ಮೆರವಣಿಗೆಯಲ್ಲಿದ್ದವರು ಯಾವ ಕಾರಣವೂ ಇಲ್ಲದೆ ಹಲ್ಲೆ ನಡೆಸಿದರು. ನಂತರ ಪೆಂಡಾಲನ್ನೂ ಸುಟ್ಟು ಹಾಕಿದರು. ಕಾನಪುರದ ಜನಪ್ರಿಯ ಸಂಸತ್ ಸದಸ್ಯೆ ಸುಭಾಷಿಣಿ ಅಲಿ ಸ್ವಲ್ಪ ಮುಂಚೆಯಷ್ಟೇ ಧರಣಿ ಕೂತವರನ್ನು ಭೇಟಿ ಮಾಡಿ, ಅವರಿಗೆ ಬೆಂಬಲ ಸೂಚಿಸಿ ಹೋಗಿದ್ದರು.

ಭಜರಂಗ ದಳದ ಈ ಕೃತ್ಯ ಪೂರ್ವ ಯೋಜಿತವಾಗಿತ್ತು ಎಂಬುದು ಅವರು ಚಾಕು, ಲಾಠಿಗಳಿಂದ ಸಜ್ಜಿತರಾಗಿದ್ದರು ಎಂಬುದರಿಂದಲೇ ಸ್ಪಷ್ಟವಾಗಿತ್ತು.

ಕೋಮುವಾದಿಗಳ ಈ ಹಲ್ಲೆಯನ್ನು ಸಿ.ಪಿ.ಐ(ಎಂ) ಪೊಲಿಟ್ ಬ್ಯೂರೋ ಬಲವಾಗಿ ಖಂಡಿಸುತ್ತಾ ಹಲ್ಲೆಕೋರರ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಬೇಕು, ಭಜರಂಗ ದಳದಂತಹ ಸಂಘಟನೆಗಳ ಸಮಾಜ ವಿರೋಧಿ, ಕೋಮುವಾದಿ ವಿಚ್ಛಿದ್ರಕಾರಿ ಚಟುವಟಿಕೆಗಳನ್ನು ದೃಢ ಕ್ರಮ ಕೈಗೊಳ್ಳಬೇಕೆಂದು ಉತ್ತರ ಪ್ರದೇಶ ಸರಕಾರ ಮತ್ತು ಜಿಲ್ಲಾ ಆಡಳಿತಕ್ಕೆ ಮನವಿ ಮಾಡಿದೆ.

ಹೈದರಾಬಾದಿನಲ್ಲಿ ಜೂನ್ 6ರಂದು ಸಿ.ಪಿ.ಐ.(ಎಂ) ಸಂಘಟಿಸಿದ ಬೃಹತ್ ರ್ಯಾಲಿ



ತಂಬ್ರಹಳ್ಳಿ ಗ್ರಾಮದಲ್ಲಿ ಸರಳ ವಿವಾಹ

ಬಳ್ಳಾರಿ ಜಿಲ್ಲೆಯ ಹಗರಿ ಬೊಮ್ಮನಹಳ್ಳಿ ತಾಲೂಕಿನ ತಂಬ್ರಹಳ್ಳಿ ಗ್ರಾಮದ ಯುವ ಸಂಗಾತಿಗಳಾದ ಎಂ.ದೇವೇಂದ್ರಪ್ಪ ಮತ್ತು ಲಕ್ಷ್ಮಿ ಸರಳವಿವಾಹವಾಗಿ ಗ್ರಾಮದ ಯುವ ಜನರಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ.

ಮೇ 21ರಂದು ನಡೆದ ಸರಳ ಸಮಾರಂಭದಲ್ಲಿ ಅಧ್ಯಾಪಿತರಾಗಿ ಆಗಮಿಸಿದ್ದ ಹೂವಿನ ಹಡಗಲಿಯ ಬಂಡಾಯ ಸಾಹಿತಿಗಳಾದ ಕೋಟಗಿರಿ ಹವಾಲ್ದಾರ್ ಮತ್ತು ಜಿಲ್ಲೆಯ. ದುಡಿಯುವ ಜನರ ಮುಂದಾಳು ಕೆ.ಆರ್. ವೆಂಕಟೇಶ್ ಯುವಜನರಲ್ಲಿ ಬೆಳೆದು ಬರುತ್ತಿರುವ ಪ್ರಗತಿಪರ ವಿಚಾರಗಳಿಗೆ ಜನ ಬೆಂಬಲಿಸ ಬೇಕೆಂದು, ಆಧುನಿಕತೆ ಬದಲಾದಂತೆ ಆಚರಣೆಗಳಲ್ಲಿ ಬದಲಾವಣೆ ಅಗತ್ಯ, ಜೊತೆಗೆ ಮನುಷ್ಯನ ಶ್ರಮದ ಫಲ ಪೋಲಾಗದಂತಾಗಲು ಇಂತಹ ಸರಳ ವಿವಾಹಗಳು ಆಗಬೇಕೆಂದು ವಿವರಿಸಿದರು. ಕಾಂ. ಜೆ.ಎಂ. ವೀರಸಂಗಯ್ಯ ಆರಂಭದಲ್ಲಿ ಸ್ವಾಗತಿಸಿದರು.

ಏಪ್ರಿಲ್ 27ರಂದು ಸರಳವಿವಾಹವಾದ ಶಾಂತಾ ಹಾಗೂ ಶ್ರೀನಿವಾಸ್ ಅವರನ್ನು ಈ ಸಮಾರಂಭದಲ್ಲಿ ಸನ್ಮಾನಿಸಲಾಯಿತು

ಸಂಗಾತಿಗಳಾದ ಶಾಂತಾ–ಶ್ರೀನಿವಾಸ್ ಮತ್ತು ಲಕ್ಷ್ಮಿ–ದೇವೇಂದ್ರಪ್ಪ. ತಮ್ಮ ಮದುವೆಯ ಸವಿನೆನಪಿಗಾಗಿ ಐಕ್ಯರಂಗ್ ಕ್ಕೆ ಐವತ್ತು ರೂಪಾಯಿಗಳ ಕಾಣಿಕೆ ನೀಡಿದ್ದಾರೆ.

ಯುವಕರಲ್ಲಿ ವೈಚಾರಿಕತೆಯನ್ನು ಬೆಳಸಿ

— ಡಾ|| ಸಿದ್ಧಲಿಂಗಯ್ಯ

ಡಿ.ವೈ.ಎಫ್.ಐ. ಉದ್ಘಾಟನಾ ಸಭೆ

ಬೆಂಗಳೂರಿನ ಚಿಕ್ಕ ಬೇಗೂರಿನಲ್ಲಿ ತಾ. 20-6-90 ರಂದು ಡಿ.ವೈ.ಎಫ್.ಐ. ಸಂಘಟನೆಯ ಉದ್ಘಾಟನೆಗೊಂಡಿತು. ಈ ಸಂಘಟನೆಯನ್ನು ಡಿ.ವೈ.ಎಫ್.ಐ. ರಾಜ್ಯಾಧ್ಯಕ್ಷರಾದ ಕಾಂ. ಎಚ್. ಎನ್.ನಾಗಮೋಹನ ದಾಸ್‌ರವರು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಡಾ|| ಸಿದ್ಧಲಿಂಗಯ್ಯ, ಅಧ್ಯಕ್ಷರಾಗಿ ಶಾಮಣ್ಣ ರೆಡ್ಡಿ ಹಾಗೂ ಆಹ್ವಾನಿತರಾಗಿ ಬೆಂಗಳೂರು ಜಿಲ್ಲಾ ಡಿ.ವೈ.ಎಫ್.ಐ. ಕಾರ್ಯದರ್ಶಿಯಾದ ಕಾಂ. ಶಿವಶಂಕರ್‌ರವರು ಆಗಮಿಸಿದ್ದರು.

ಕಾಂ. ನಾಗಮೋಹನ ದಾಸ್‌ರವರು ಮಾತನಾಡಿ ಇಂದಿನ ಕೋಮುವಾದ, ವಿಚ್ಛಿದ್ರಕಾರಕ ಶಕ್ತಿಗಳ ಪ್ರಯತ್ನವನ್ನು ಖಂಡಿಸಿ, ಅದರ ಪ್ರಭಾವವನ್ನು ತಗ್ಗಿಸಲು ಹಾಗೂ ರಾಷ್ಟ್ರೀಯ ಭಾವೈಕ್ಯತೆ, ಸಮಗ್ರತೆಯನ್ನು ಕಾಪಾಡಿಕೊಳ್ಳಲು ಯುವಕರಿಗೆ ಕರೆ ಇತ್ತರು. ಡಾ|| ಸಿದ್ಧಲಿಂಗಯ್ಯನವರು ಮಾತನಾಡುತ್ತಾ, ಇಂದಿನ ಯುವಕರಲ್ಲಿ ಬೆಳೆಯುತ್ತಿರುವ ಮೌಢ್ಯ, ಕಂದಾಚಾರಗಳ ಬಗ್ಗೆ ವಿಷಾದ ವ್ಯಕ್ತಪಡಿಸಿ, ವೈಚಾರಿಕತೆಯನ್ನು ಎಲ್ಲಾ ಯುವಕರಲ್ಲಿ ಬೆಳಸಲು

ಎಂದು ಹಾರೈಸಿದರು. ಕಾಂ|| ಶಿವಶಂಕರರವರು ಈ ಸಂಘಟನೆಯ ಉದ್ದೇಶ ಹಾಗೂ ಈ ಸಂಘಟನೆಯ ಕೆಲಸಕಾರ್ಯಗಳನ್ನು ವಿವರಿಸಿ, ಈ ಸಂಘಟನೆಯನ್ನು ಹೆಚ್ಚೆಚ್ಚು ವ್ಯಾಪಕಗೊಳಿಸುವಂತೆ ಕರೆ ನೀಡಿದರು. ಅಲ್ಲದೆ ಶಾಮಣ್ಣರೆಡ್ಡಿ, ರೈತ ಸಂಘದ ಮುಖಂಡರು ಮಾತನಾಡಿದರು.

ಈ ಸಭೆಯಲ್ಲಿ ಸಂಚಾಲಕರಾಗಿ ಕಾಂ. ಪ್ರಕಾಶ್‌ರವರನ್ನು ಆಯ್ಕೆ ಮಾಡಲಾಗಿದೆ.

ಬಲ್ಗೇರಿಯಾದಲ್ಲಿ ಕಮ್ಯುನಿಸ್ಟರ ವಿಜಯ



ಬಲ್ಗೇರಿಯಾ ಪ್ರಧಾನಿ ಲುಕನೋವ್

ಬಲ್ಗೇರಿಯಾದಲ್ಲಿ ಸೋಷಲಿಸ್ಟ್ ಪಕ್ಷದ ಜಯ ಪೂ.ಯೂರೋಪಿನಲ್ಲಿ ಸಮಾಜವಾದದ ಹಿನ್ನಡೆ ಅಂದುಕೊಂಡಷ್ಟು ಸಂಪೂರ್ಣ ಅಲ್ಲ ಎಂಬ ಸಮಾಧಾನ ತಂದಿತ. ರೋಮೇನಿಯಾದಲ್ಲಿ ಚುನಾಯಿತ ಸರಕಾರದ ವಿರುದ್ಧ ಗಲಭೆಗಳು, ಅಮೇರಿಕನ್ ಸರ್ಕಾರದ ವರ್ತನೆ 'ಪ್ರಜಾಪ್ರಭುತ್ವದ' ಬಗ್ಗೆ ಅವರ ಕಳಕಳಿಯನ್ನು ಬಯಲುಮಾಡಿದೆ. ಮಂಡೇಲಾ ಯೂರೋಪಿನ ಪ್ರವಾಸ ಮುಗಿಸಿ ಅಮೇರಿಕಕ್ಕೆ ಭೇಟಿ ನೀಡುವವರಿದ್ದಾರೆ. ಇಡೀ ಅಮೇರಿಕಾದ ಜನತೆ ಅವರಿಗೆ ಭವ್ಯ ಸ್ವಾಗತ ಕೊಡಲು ಕಾದಿದ್ದಾರೆ. ಶ್ರೀಲಂಕಾದಲ್ಲಿ LTTE ಮತ್ತು ಸೈನ್ಯದ ನಡುವೆ ಭೀಕರ ಕಾನನ ಆರಂಭವಾಗಿದ್ದು, ತಮಿಳರ ಸಮಸ್ಯೆಗೆ ಶಾಂತಿಯುತ ಪರಿಹಾರದ ಸಾಧ್ಯತೆ ಹಿಂದೆ ಸರಿದಿದೆ.

ಬಲ್ಗೇರಿಯಾ ಸೋಶಲಿಸ್ಟ್ ಪಕ್ಷ (ಹಿಂದಿನ ಕಮ್ಯುನಿಸ್ಟ್ ಪಕ್ಷದ ಹೊಸ ಹೆಸರು) ಬಲ್ಗೇರಿಯಾದಲ್ಲಿ ಇತ್ತೀಚೆಗೆ ನಡೆದ ಬಹು-ಪಕ್ಷೀಯ ಚುನಾವಣೆಗಳಲ್ಲಿ ಸ್ಪಷ್ಟ ಬಹುಮತಗಳಿಸಿದೆ. ಎರಡು ಸುತ್ತುಗಳ ಮತದಾನದ ನಂತರ ಸೋಶಲಿಸ್ಟ್ ಪಕ್ಷ 400 ಸದಸ್ಯರ ಪಾರ್ಲಿಮೆಂಟಿನಲ್ಲಿ 211 ಸ್ಥಾನಗಳನ್ನು ಗೆದ್ದುಕೊಂಡಿದೆ. ಸೋಶಲಿಸ್ಟ್ ಪಕ್ಷ ಶೇಕಡಾ 48 ಕ್ಕಿಂತಲೂ ಹೆಚ್ಚು ಮತಗಳಿಸಿದರೆ, ವಿರೋಧ ಪಕ್ಷಗಳ ರಂಗ ಶೇಕಡಾ 36.2 ಮತಗಳಿಸಿದೆ. ಮೊದಲ ಸುತ್ತಿನಲ್ಲಿ ಸೋಶಲಿಸ್ಟ್ ಪಕ್ಷ 171 ಸ್ಥಾನಗಳನ್ನುಗಳಿಸಿದರೆ ವಿರೋಧ ಪಕ್ಷಗಳು 104 ಸ್ಥಾನಗಳಿಸಿದವು.

ಚುನಾವಣೆ ಸೋತ ವಿರೋಧ ಪಕ್ಷಗಳು ಸೋಲನ್ನು ಸುಲಭವಾಗಿ ಒಪ್ಪಿಕೊಳ್ಳಲಿಲ್ಲ. ಸರ್ಕಾರ-ವಿರೋಧಿ ಪ್ರದರ್ಶನಗಳನ್ನು ನಡೆಸಿದವು ಜನರ ಈ ತೀರ್ಪು ಚುನಾವಣೆಯಲ್ಲಿ 'ಅನುಚಿತ ಕ್ರಮ'ಗಳಿಂದಾಗಿ ಪಡೆದದ್ದು ಎಂದು ಬೊಬ್ಬೆ ಹೊಡೆದವು. ಚುನಾವಣೆಯ ಸಮಯದಲ್ಲಿ ಆಗಲಿ, ಆನಂತರ ಆಗಲಿ (ಫಲಿತಾಂಶ ಹೊರಬೀಳುವ ಮೊದಲು) ಅನುಚಿತ ಕ್ರಮಗಳ ಬಗ್ಗೆ ವಿರೋಧ ಪಕ್ಷಗಳೇ ಚಕಾರ ಎತ್ತಿರಲಿಲ್ಲ. ಸಾರ್ವತ್ರಿಕ ಮುಷ್ಕರದ ಬೆದರಿಕೆ ಹಾಕಿದವು. ಮೊನ್ನೆ ಮೊನ್ನೆಯವರೆಗೆ 'ಪ್ರಜಾಪ್ರಭುತ್ವ' 'ಚುನಾವಣೆ'ಗಳ ಬಗ್ಗೆ ಬೊಬ್ಬೆ ಹೊಡೆಯುತ್ತಿದ್ದ ಈ ಪಕ್ಷಗಳು ಜನರ ತೀರ್ಪನ್ನು ಒಪ್ಪಿಕೊಳ್ಳುವಷ್ಟು ಪ್ರಜಾಸತ್ತಾತ್ಮಕವಾಗಿಯೂ ಇಲ್ಲ. ಈ ಪಕ್ಷಗಳು ಪ್ರಜಾಪ್ರಭುತ್ವ, ಜನರ ಕಲ್ಯಾಣದ ಬಗ್ಗೆ ಇರುವ ಕಳಕಳಿಯ ಬಗ್ಗೆ ಜನತೆಗೆ ನಿಜ ತಿಳಿಯುವಂತಾಗಿದೆ.

ಕಮ್ಯುನಿಸ್ಟ್ ವಿರೋಧಿ ತಂತ್ರಗಳು

ಇನ್ನೊಂದು ದೇಶ ಚುನಾವಣೆಗೆ ಹೋದದ್ದು ಚೆಕೋಸ್ಲೋವೋಕಿಯಾ. ಈ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಸೋಲನ್ನು ಅನುಭವಿಸಿದೆ. 800 ಸದಸ್ಯರಿರುವ ಚೆಕ್ ಪಾರ್ಲಿಮೆಂಟ್‌ನಲ್ಲಿ ಪಕ್ಷಗಳ ಬಲಾಬಲ ಈ ರೀತಿ ಇದೆ: 'ಸಿವಿಕ್ ಫೋರಂ' (ಚೆಕ್ ಪ್ರಾಂತ್ಯದ ಪಕ್ಷ) ಮತ್ತು ಸ್ಲೋವಾಕ್ ಪ್ರಾಂತ್ಯದ 'ಹಿಂಸೆಯ ವಿರುದ್ಧ ಸಾರ್ವಜನಿಕರು 169; ಕಮ್ಯುನಿಸ್ಟ್ ಪಕ್ಷ 48 ; ಡೆಮಾಕ್ರಾಟ್- 40 ಉಳಿದವರು43 ಚೆಕೋಸ್ಲಾವೋಕಿಯಾದಲ್ಲಿ ಒಂದು ರೀತಿಯಲ್ಲಿ ನೋಡಿದರೆ ಸಕ್ರಮ ಚುನಾವಣೆ'ಗಳು ನಡೆದಿವೆ ಎಂದು ಹೇಳುವುದು ಕಷ್ಟ. ಹಿಂದೆ ಕಮ್ಯುನಿಸ್ಟ್ ಪಕ್ಷದಲ್ಲಿದ್ದವರನ್ನೆಲ್ಲಾ ಚುನಾವಣೆಯಲ್ಲಿ ಸ್ಪರ್ಧಿಸಲು ಬಿಡಬಾರದು ಎಂದು ಹಲವು ಪಕ್ಷಗಳು ಬೊಬ್ಬೆ ಹೊಡೆಯುತ್ತಿದ್ದವು. ಕಮ್ಯುನಿಸ್ಟ್ ಪಕ್ಷದ ಪ್ರಚಾರಕ್ಕೆ ಅಡ್ಡಿ, ಬೆದರಿಕೆ ಒಡ್ಡಲಾಗಿತ್ತು. ಇದನ್ನು ನಡೆಸುತ್ತಿದ್ದದ್ದು ಸಾಮ್ರಾಜ್ಯಶಾಹಿ - ಪರ ಶಕ್ತಿಗಳು ಮಾತ್ರವಲ್ಲ, ಅಥವಾ ಅದು ರಾಜಕೀಯ ಪ್ರಚಾರಕ್ಕೆ ಸೀಮಿತವಾಗೂ ಇರಲಿಲ್ಲ. ಬಹುಪಕ್ಷೀಯ ಚುನಾವಣಾ ಪದ್ಧತಿಯೇ ಪ್ರಜಾಪ್ರಭುತ್ವದ ಏಕೈಕ ರೂಪವೆಂದು ಕೊಚ್ಚಿಕೊಳ್ಳುತ್ತಿದ್ದ ಈ ಶಕ್ತಿ ಗಳೇ ರಾಜಕೀಯ ಸಿದ್ಧಾಂತ ಆಧಾರಿತ ಪಕ್ಷವೊಂದರ ಮೇಲೆ ನಿರ್ಬಂಧ ಹೇರುವುದು ವಿರೋಧಾಭಾಸವಾಗಿ ಕಾಣಬಹುದು. ಆದರೆ ವಿರೋಧಾಭಾಸ ಇರುವುದು ಅವರ ಪ್ರಜಾಪ್ರಭುತ್ವ 'ಪರಿ ಕಲ್ಪನೆ'ಯಲ್ಲಿ.

ಇದು ಎಲ್ಲಿಯವರೆಗೆ ಹೋಗಿತ್ತೆಂದರೆ ರಾಜಧಾನಿ ಪ್ರಾಗ್‌ನ ಮುಖ್ಯ ಪ್ರಾಸಿಕ್ಯೂಟರ್ ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಬೇಕು ಎಂದು ಬಹಿರಂಗವಾಗಿ ಪತ್ರಿಕೆಗಳಲ್ಲಿ ಬರೆದಿದ್ದರು. ಮೇ 1 ರಂದು ನಿಷೇಧವನ್ನು ತಾವೇ ಜಾರಿಗೆ ತರುವುದಾಗಿಯೂ ಹೇಳಿಕೊಂಡಿದ್ದರು. ಕಮ್ಯುನಿಸ್ಟ್ ಪಕ್ಷದ ತೀವ್ರ ಪ್ರತಿಭಟನೆ ನಂತರ ದೇಶದ ಜನರಲ್ ಪ್ರಾಸಿಕ್ಯೂಟರ್ ಇದು ಅವರ 'ವೈಯಕ್ತಿಕ ಅಭಿಪ್ರಾಯ' ಕಾನೂನು ಬದ್ಧವಾದ ಅಭಿಪ್ರಾಯವಲ್ಲ ಎಂದು ಹೇಳಬೇಕಾಯಿತು. ಆದರೂ ಚುನಾವಣಾ'ಯ ಪ್ರಚಾರದುದ್ದಕ್ಕೂ ಕಮ್ಯುನಿಸ್ಟರ ವಿರುದ್ಧ ಅಪಪ್ರಚಾರ ನಡೆಯಿತು.

ರೊಮೇನಿಯಾದಲ್ಲಿ 'ಬಲಪಂಥೀಯ ಪಿತೂರಿ'

ಇದೇ ರೀತಿಯ ಪ್ರಯತ್ನ ರೊಮೇನಿಯಾದಲ್ಲೂ ನಡೆದಿತ್ತು. ಆದರೆ ಇದು ಅಲ್ಲಿ ಸಫಲವಾಗಿಲ್ಲ. ಮಾಜಿ ಕಮ್ಯುನಿಸ್ಟರು ಬಹುಸಂಖ್ಯಾತರಿರುವ ಆಳುವ ಪಕ್ಷ ಗೆದ್ದು, ಬಲಪಂಥೀಯ ಪಕ್ಷಗಳಿಗೆ ಭಾರೀ ಸೋಲಾದಾಗ 'ಚುನಾವಣಾ ಅಕ್ರಮ'ಗಳ ಹುಯಿಲೆಬ್ಬಿಸಲಾಯಿತು. ಇದಕ್ಕೆ ಸರ್ಕಾರ ಜನತೆ, ಸೊಪ್ಪು ಹಾಕದಾಗ ಹಿಂಸಾತ್ಮಕ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಇಲ್ಲೂ ಸೋತ ಶಕ್ತಿಗಳು ಜನರ ತೀರ್ಪನ್ನು ಪ್ರಜಾಸತ್ತಾತ್ಮಕವಾಗಿ ಒಪ್ಪಿಕೊಂಡಿಲ್ಲ. ಇದಕ್ಕೆ ಪಾಶ್ಚಿಮಾತ್ಯ ಶಕ್ತಿಗಳು ಅದರಲ್ಲೂ ಅಮೆರಿಕನ್ ಸಾಮ್ರಾಜ್ಯಶಾಹಿ ಕುಮ್ಮಕ್ಕು ಕೊಡುತ್ತಿದ್ದೆ ಹಿಂಸಾತ್ಮಕ ಕಮ್ಯುನಿಸ್ಟ್-ವಿರೋಧಿ ದೊಂಬಿಗರನ್ನು ಪೋಲೀಸರು ಬಂಧಿಸಿದಾಗ ನಡೆದ ಹಿಂಸಾಚಾರವನ್ನೇ ನೆಪವಾಗಿ ಹಿಡಿದು ಅಮೆರಿಕಾ ಆರ್ಥಿಕ ಸಹಾಯ ನಿಲ್ಲಿಸಿದೆ. ಇದು ರೊಮೆನಿಯನ್ ಜನತೆಯ ತೀರ್ಪನ್ನು ಪ್ರಜಾಪ್ರಭುತ್ವದ 'ಅಆ ಇಈ' ಮೊದಲ ನಿಯಮವನ್ನು ನಿರಾಕರಿಸುವುದಲ್ಲದೆ ಮತ್ತೇನು? ರೊಮೆನಿಯನ್ ಸರ್ಕಾರ 'ಈ ಹಿಂಸಾಚಾರವನ್ನು 'ಸರ್ಕಾರದ ವಿರುದ್ಧ ಬಲಪಂಥೀಯ ಪಿತೂರಿ' ಎಂದು ಕರೆದಿದೆ. ಸರ್ಕಾರದ ಪರವಾಗಿ ಗಣಿ ಕಾರ್ಮಿಕರು ಈ ದೊಂಬಿಗಾರರ ವಿರುದ್ಧ ಕಾರ್ಯಾಚರಣೆಗೆ ಇಳಿದಿದ್ದು ಈ ಸಂದರ್ಭದಲ್ಲಿ ಗಮನಾರ್ಹ.

ಲೋಕಸಂಚಾರ

ಮಂಡೇಲಾರನ್ನು ಹಿಡಿದುಕೊಟ್ಟ ಅಮೆರಿಕನ್ ರಾಯಭಾರಿ

ದ. ಆಫ್ರಿಕಾ ವರ್ಣಭೇದದ ಸರ್ಕಾರದ ಕಣ್ಣುತಪ್ಪಿಸಿ ಚಳುವಳಿಯ ನಾಯಕತ್ವ ವಹಿಸಿದ್ದ ನೆಲ್ಸನ್ ಮಂಡೇಲಾರ ಸುಳಿವನ್ನು ಪೋಲೀಸರಿಗೆ 1962 ರಲ್ಲಿ ಒದಗಿಸಿ ಅವರ ಬಂಧನಕ್ಕೆ ಕಾರಣವಾದದ್ದು ಆಗ ದ. ಆಫ್ರಿಕಾದಲ್ಲಿದ್ದ ಅಮೆರಿಕನ್ ರಾಯಭಾರಿ ಎಂದು ಒಂದು ಪತ್ರಿಕೆ ಹೊರಗೆಡವಿದೆ. ಕೆಲವು ಮಾಜಿದ ಆಫ್ರಿಕಾದ ಪೋಲೀಸ್ ಅಧಿಕಾರಿಗಳ ಸಂದರ್ಶನದ ಆಧಾರದ ಮೇಲೆ. ಅಮೆರಿಕದ ಪಾತ್ರ ಈ ರೀತಿ ಬಯಲಾಗಿರುವುದು ಈ ಸಮಯದಲ್ಲಿ ಅಧ್ಯಕ್ಷರಿಗೆ ತೀರಾ ಮುಜುಗರ ತಂದಿದೆ ಎಂದು ಹೇಳಲಾಗಿದೆ. ಯುರೋಪಿನ ಪ್ರವಾಸದ ನಂತರ ಮಂಡೇಲಾರವರು ಈವಾರ ಅಮೆರಿಕದ ಪ್ರವಾಸ ಆರಂಭಿಸಲಿದ್ದಾರೆ.

ಮಂಡೇಲಾರಿಗೆ ಅಮೆರಿಕಾದ ಜನತೆ ಭವ್ಯ ಸ್ವಾಗತ ನೀಡಲು ಕಾತುರದಿಂದ ಕಾದಿದ್ದಾರೆ. ಅವರನ್ನು ನ್ಯೂಯಾರ್ಕ್‌ನ ಮೊಟ್ಟ ಮೊದಲ ಕರಿಯ ಮೇಯರ್ ಎದುರುಗೊಳ್ಳಲಿದ್ದಾರೆ. ಮಂಡೇಲಾ ಭಾಗವಹಿಸುವ ಎಷ್ಟೋ ರ್‍ಯಾಲಿಗಳು ಸಭೆಗಳಿಗೆ ಟಿಕೇಟ್ ಮಾರಾಟವಾಗಿ ಹೋಗಿದೆ. ಅಮೆರಿಕಾದ ಕಾರ್ಮಿಕ ಸಂಘಗಳೇ ಮಂಡೇಲಾರ ಭೇಟಿಗಾಗಿ ANCಗೆ ಸುಮಾರು 2 ಲಕ್ಷ ಡಾಲರ್‌ಗಳ ನಿಧಿ ಸಂಗ್ರಹಿಸಿದೆ. ಅವರ ಭೇಟಿ ಬಗ್ಗೆ ಜನತೆಯ ಉತ್ಸುಕ ಎಷ್ಟಿತ್ತೆಂದರೆ 'ಕೋಕಾ ಕೋಲಾ' ಕೂಡಾ ನಿಧಿಗೆ ಕಾಣಿಕೆ ಕೊಡುವುದಾಗಿ ಮುಂದೆ ಬಂದಿತ್ತು. ದ. ಆಫ್ರಿಕಾದ ತಂಪು ಪಾನೀಯದ ಶೇಕಡಾ 70 ಭಾಗ ಹೊಂದಿರುವ 'ಕೋಕಾ ಕೋಲಾ' ದ. ಆಫ್ರಿಕಾದ ಮೇಲೆ ನಿರ್ಬಂಧ ಹೇರಿದ ಹೊರತು 'ಕೋಕಾ ಕೊಲಾ ಡಾಲರುಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ANC ತಿಳಿಸಿದೆ.

★ ಪೋಲೆಂಡ್‌ನ 'ಸಾಲಿಡಾರಿಟಿ'ಯ ನಾಯಕ ಲೆಕ್ ವಲೇಸಾ ದೇಶದಲ್ಲಿ ಅನುಸರಿಸ ಹೊರಟಿರುವ ಮಾರುಕಟ್ಟೆ ಆರ್ಥಿಕತೆ 19 ನೇ ಶತಮಾನದ ಕ್ರೂರ ಬಂಡವಾಳಶಾಹಿ ಆಗಬಾರದು' ಎಂದಿದ್ದಾರಂತೆ. 20 ನೇ ಶತಮಾನದ ಕ್ರೂರ ಅಮೆರಿಕನ್ ಬಂಡವಾಳಶಾಹಿಯಾದರೆ ಪರವಾಗಿಲ್ಲವೇ ವಲೇಸಾರವರೇ?

★ ಥ್ಯಾಚರ್ ಸರ್ಕಾರ 1979 ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಬ್ರಿಟನ್‌ನ ಮನೆ ಇಲ್ಲದ ನಿರ್ಗತಿಕರ ಸಂಖ್ಯೆ ಇಮ್ಮಡಿಯಾಗಿದೆ. ಕಳೆದ 30 ವರ್ಷಗಳಲ್ಲಿ ಹತ್ತು ಪಟ್ಟು ಏರಿದೆ. ಹಿಂದಿನ ಯಾವುದೇ ದಶಕದಲ್ಲಿ ಕಟ್ಟಿದ್ದಕ್ಕಿಂತ ಅತ್ಯಂತ ಕಡಿಮೆ ಮನೆಗಳನ್ನು ಬ್ರಿಟನ್‌ನಲ್ಲಿ ಈ ದಶಕದಲ್ಲಿ ಕಟ್ಟಲಾಯಿತು. ಇದು ಥ್ಯಾಚರ್ ಮಾದರಿಯ 'ಸಮೃದ್ಧಿ'.

★ 'ಶ್ರೀಮಂತಿಕೆ ಸಮೃದ್ಧಿ ಹರಿಯುವ ನಾಡು' ಅಮೆರಿಕಾದಲ್ಲಿ 6 ವರ್ಷಕ್ಕಿಂತ ಕೆಳಗಿನ 4 ಮಕ್ಕಳಲ್ಲಿ ಒಂದು ಮಗು ಬಡತನದ ರೇಖೆಯ ಕೆಳಗೆ ವಾಸಿಸುತ್ತಿರುವ ಕುಟುಂಬಕ್ಕೆ ಸೇರಿದ್ದು. ಅತ್ಯಂತ ಅಮಾನವೀಯ ಪರಿಸ್ಥಿತಿಯಲ್ಲಿ ದುಡಿಯುವ ಮಕ್ಕಳ ಸಂಖ್ಯೆ 1983-84 ಅವಧಿಯಲ್ಲಿ ಎರಡೂವರೆ ಪಟ್ಟು ಆಗಿದೆ. ಬಾಲಕಾರ್ಮಿಕ ಕಾನೂನು ಉಲ್ಲಂಘನೆಗಳು (ದಾಖಲಾದದ್ದು ಮಾತ್ರ) ಕಳೆದ 6 ವರ್ಷಗಳಲ್ಲಿ ಒಂದೂವರೆಪಟ್ಟು ಏರಿದೆ. ಇದು ಕೊಲಂಬಿಯಾ ವಿಶ್ವವಿದ್ಯಾಲಯದ ಅಧ್ಯಯನದಿಂದ ಹೊರಬಿದ್ದಿರುವ ಸಂಗತಿ.

★ ಸೋವಿಯತ್ ಒಕ್ಕೂಟ ಎರಡನೆಯ ಮಹಾಯುದ್ಧದಲ್ಲಿ ಕಳೆದುಕೊಂಡ ಜನಸಂಖ್ಯೆ 2.7-2.8 ಕೋಟಿ. ಮೊದಲು ತಿಳಿದ ಹಾಗೆ ಕೋಟಿ 2 ಅಲ್ಲ, ಎಂದು ಒಂದು ಅಧ್ಯಯನ ತಿಳಿಸಿದೆ. ಜರ್ಮನಿ ಪಶ್ಚಿಮ ಮಿಲಿಟರಿ ಕೂಟದ ಸದಸ್ಯತ್ವ ಪ್ರಶ್ನೆ ಆ ದೇಶದ ಸಾರ್ವಭೌಮತೆಗೆ ಸೋವಿಯತ್ ಒಕ್ಕೂಟ ಮಾಡಿದ 'ವೆಚ್ಚ' ಮರೆಯಬಾರದು.



[illegible] ಹತ್ಯಾಕಾಂಡದ ವಿರುದ್ಧ ಪ್ರತಿಭಟನಾ ಪ್ರದರ್ಶನದ [illegible] ಪೋಲೀಸರು ಬಂಧಿಸುತ್ತಿದ್ದಾರೆ.

ಶರಾವತಿ ಟೈಲ್ ವರ್ಕ್ಸ್ ಮನೇಜ್‌ಮೆಂಟನ ಕಾರ್ಮಿಕ ವಿರೋಧಿ ನೀತಿಗೆ ಸಿ.ಐ.ಟಿ.ಯು ಖಂಡನೆ.

ಭವಿಷ್ಯ ವೇತನದಲ್ಲಿ ನಿಗದಿಯಾದ "ಪರಿಮಿತ ತುಟ್ಟಿಭತ್ಯೆ" ಕೊಡಬೇಕೆಂದು ಮನೇಜ್‌ಮೆಂಟನ್ನು ಕಾರ್ಮಿಕರು ಒತ್ತಾಯಿಸಿದಾಗ, ತಾರೀಖು 12-2-1990 ರಿಂದ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ತಾಲೂಕಿನ ಮಾವಿನಕುರ್ವೆಯಲ್ಲಿರುವ ಶರಾವತಿ ಟೈಲ್ ವರ್ಕ್ಸ್‌ನ ಮನೇಜ್‌ಮೆಂಟ್ ಕಾಯಿದೆಬದ್ಧ ಸವಲತ್ತನ್ನು ಕೊಡಲು ನಿರಾಕರಿಸಿದ್ದಲ್ಲದೇ ಎಲ್ಲಾ ಕಾರ್ಮಿಕರಿಗೆ ಕೆಲಸವನ್ನು ಕೊಡಲು ನಿರಾಕರಿಸಿ ಬಹಳ ಕಷ್ಟ - ನಷ್ಟಕ್ಕೆ ಒಳಪಡಿಸುತ್ತಿರುವುದನ್ನು

ಸಿ.ಐ.ಟಿ.ಯು ರಾಜ್ಯ ಸಮಿತಿ ತಾರೀಖು 10 - 6 - 1990 ರಂದು ಬೆಂಗಳೂರಿನಲ್ಲಿ ಸಭೆ ಸೇರಿದಾಗ ತೀವ್ರವಾಗಿ ಖಂಡಿಸಿ, ಮನೇಜ್‌ಮೆಂಟ್ ಕಾರ್ಮಿಕರಿಗೆ ಆದ ನಷ್ಟವನ್ನು ಭರ್ತಿ ಮಾಡಿ, ಕಾನೂನು ರೀತಿಯ ಸವಲತ್ತುಗಳನ್ನು ನೀಡಿ ಎಲ್ಲಾ ಕಾರ್ಮಿಕರಿಗೂ ಕೆಲಸ ಕೊಡಬೇಕೆಂದು ಒತ್ತಾಯಿಸಿದೆ. ಇಲ್ಲವಾದಲ್ಲಿ ಮಣಿಪಾಲ ಇಂಡಸ್ಟ್ರೀಸ್‌ನ ಪ್ರಧಾನ ಕಛೇರಿಯ ಎದುರು ಪ್ರತಿಭಟನಾ ಧರಣಿ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದೆ.

ಹೊನ್ನಾವರದಲ್ಲಿ ಬೃಹತ್ ಸಾರ್ವಜನಿಕ ಸಭೆ

ಶರಾವತಿ ಟೈಲ್‌ವರ್ಕ್ಸ್‌ನ ಈ ಕೃತ್ಯ ಅನ್ಯಾಯಯುತ ಎಂದು ಕೆಲವು ಟೀಲಾಗಳಿಂದ ಪ್ರತಿಪಾದಿಸುತ್ತಿರುವ ಹಿನ್ನಲೆಯಲ್ಲಿ ಸಾರ್ವಜನಿಕರಿಗೆ ನಿಜ ಸ್ಥಿತಿ ತಿಳಿಸುವ ಉದ್ದೇಶದಿಂದ ಹೊನ್ನಾವರದಲ್ಲಿ ದುಡಿಯುವ ಜನರ ಸೋದರ ಸಂಘಟನೆಗಳ ನೇತೃತ್ವದಲ್ಲಿ ಜೂನ್ 7 ರಂದು ಬೃಹತ್ ಸಾರ್ವಜನಿಕ ಸಭೆ ಏರ್ಪಡಿಸಲಾಯಿತು. ಸಭೆಯ ಮೊದಲು ಕಾರ್ಮಿಕರು ಮೆರವಣಿಗೆಯಲ್ಲಿ ಬಂದಿದ್ದರು.

ಯುವಜನ ಮುಖಂಡಸುರೇಶ ತಾಂಡೇಲರವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ ವಿಕ್ಟರ್ ರೋಡ್ರಿಗಸ್, ಸಿ.ಐ.ಟಿಯು ಮುಖಂಡರಾದ ವಿ. ನರಸಿಂಹ, ಸಿ.ನಾರಾಯಣ, ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ್, ಯುವಜನ ರಾಜ್ಯ ಮುಂದಾಳು ಜಯಕುಮಾರ್ ಮಾತನಾಡಿದರು. ಆರಂಭದಲ್ಲಿ ಶ್ರೀ ರಾಮ ಅಶ್ವರಗೌಡ ಸ್ವಾಗತ ಭಾಷಣ ಮಾಡಿದರು. ತಿಲಕ್ ಹಳ್ಳೇಗೌಡ ಕೊನೆಯಲ್ಲಿ ಎಲ್ಲರಿಗೂ ಅಭಿನಂದನೆ ಸಲ್ಲಿಸಿದರು.

ರಸ್ತೆ ದುರಸ್ತಿಗಾಗಿ ಆಟೋಗಳ ಮೆರವಣಿಗೆ

ತಾ|| 20-6-90ರಂದು ಆಟೋ ರಿಕ್ಷಾ ಡ್ರೈವರ್ಸ್ ಯೂನಿಯನ್ (ಸಿಐಟಿಯು)ಗೆ ಸೇರಿದ ನೂರಾರು ಆಟೋ ಚಾಲಕರು ತಮ್ಮ ಆಟೋಗಳೊಂದಿಗೆ ಮೈಸೂರು ಬ್ಯಾಂಕ್ ವೃತ್ತದಿಂದ ಬೆಂಗಳೂರು ಮಹಾನಗರ ಪಾಲಿಕೆಗೆ ಮೆರವಣಿಗೆ ನಡೆಸಿದರು. ಬೆಂಗಳೂರು ನಗರದ ಹೆಚ್ಚಿನ ರಸ್ತೆಗಳು ಹಳ್ಳಕೊಳ್ಳಗಳಿಂದ ತುಂಬಿದ್ದು ರಸ್ತೆಗಳಲ್ಲಿ ಸುರಕ್ಷಿತವಾಗಿ ವಾಹನಗಳನ್ನು ನಡೆಸಲು ಸಾಧ್ಯವಿಲ್ಲದ ಪರಿಸ್ಥಿತಿ ಇರುವುದರಿಂದ, ಅವನ್ನು ದುರಸ್ತಿ ಮಾಡುವಂತೆ ಒತ್ತಾಯಿಸಿ ಡೆಪ್ಯುಟಿ ಮೇಯರ್‌ರವರಿಗೆ ಮನವಿ ಪತ್ರ ಸಲ್ಲಿಸಿದರು.

ಈ ವಾರ...

* ಒಂದು ಹಂತದಲ್ಲಿ, ಅನಾರೋಗ್ಯ ಕಾರಣದಿಂದಾಗಿ ಕೋಮುವಾದಿ ಬೆಳವಣಿಗೆ ಬಗ್ಗೆ ಎಲ್.ಕೆ.ಅಡ್ವಾನಿಯವರು ತಾನು ಅಸಹಾಯಕ ಎಂದು ಒಪ್ಪಿಕೊಂಡಿರುವುದು ನೈಜವಲ್ಲ. ಏಕೆಂದರೆ ಹಿಂದುತ್ವ ಸ್ಥಾಪಿಸುವ ಎಚ್ಚರಗೇಡಿತನಕ್ಕೆ ಬಿ.ಜೆ.ಪಿ.ಯೂ ಕಾಣಿಕೆ ನೀಡಿದೆ.

—ಟೈಂಸ್ ಆಫ್ ಇಂಡಿಯಾ ಜೂನ್ 14.

* ಉತ್ತರ ಪ್ರದೇಶದಲ್ಲಿ ನವಂಬರ್ ಚುನಾವಣೆಗಳಲ್ಲಿ 14 ಅಸೆಂಬ್ಲಿ, ಒಂದು ಲೋಕ ಸಭಾ ಸ್ಥಾನ ಪಡೆದು ದೊಡ್ಡ ಗೆಲುವು ಪಡೆದ ಬಹು ಜನ ಸಮಾಜ ಪಾರ್ಟಿ ಅಭ್ಯಾಗವಾಗುವ ಸಾಧ್ಯತೆಯಿದೆ....ಬಿ.ಎಸ್.ಪಿ. ಎಂ.ಎಲ್.ಎ ಗಳು ವಿಧಾನಸಭೆಯಲ್ಲಿ ಹರಿಜನರ ಮೇಲೆ ಅತ್ಯಾಚಾರದ ಒಂದಾದರೂ ಪ್ರಶ್ನೆಯನ್ನು ಎತ್ತಿಲ್ಲ. ರಾಜ್ಯದ ವಿವಿಧ ಭಾಗಗಳಿಂದ ವರದಿಯಾಗಿರುವ ಹರಿಜನರ ವಿರುದ್ಧ ಅತ್ಯಾಚಾರಗಳ ಘಟನೆಗಳ ವಿರುದ್ಧ ಪ್ರತಿಭಟಿಸಿಲ್ಲ.

—ಹಿಂದೂ' ನಲ್ಲಿ ಸುದ್ದಿ, ಜೂನ್ 15.

* "ಅಮೆರಿಕಾದಿಂದ ಬರುವ ಹಣದಿಂದ ವಲೇಸಾ ಹಂದಿಯಂತೆ ಕೊಬ್ಬಿದ್ದಾನೆ. ನನಗೆ ಮಕ್ಕಳಿಗೂ ಆಹಾರ ಕೊಳ್ಳಲು ಕಾಸಿಲ್ಲ" ಜನದಿಂದ ತುಂಬಿದ್ದ ವಾರ್ಸಾ ಬಸ್ ನಲ್ಲಿ ಒಬ್ಬ ಗೊಣಗಿದ.....ಏಪ್ರಿಲ್‌ನಲ್ಲಿ ನಿಜವೇತನ ಕಳೆದ ಡಿಸೆಂಬರ್‌ನಲ್ಲಿದ್ದುದಕ್ಕಿಂತ 40% ಕಡಿಮೆಯಾಗಿದೆ.....ಜನರು ಜೀವನ ನಡೆಸಲು ಏಗುತ್ತಿರುವಂತೆ ರಾಜಕೀಯ ಪರಿಸ್ಥಿತಿಯೂ ಹೆಚ್ಚು ಕ್ಲಿಷ್ಟಗೊಳ್ಳುತ್ತಿದೆ....ತಾನೇ ಸೃಷ್ಟಿಸಿದ ಸರಕಾರದ ಧೋರಣೆಯಿಂದ ನಿಜವೇತನ ಇಳಿದು, ನಿರುದ್ಯೋಗ ಹೆಚ್ಚುತ್ತಿರುವಾಗ ಒಂದೆಡೆ ಅಂತಹ ಸರಕಾರವನ್ನು ಬೆಂಬಲಿಸುತ್ತಾ ಇನ್ನೊಂದೆಡೆ ವಿಶ್ವಾಸಾರ್ಹ ಕಾರ್ಮಿಕ ಸಂಘವಾಗಿ ಹೇಗುಳಿಯುವುದು— ಇದೀಗ ಸಾಲಿಡಾರಿಟಿಯ ಗಂಭೀರ ಸಮಸ್ಯೆ.

—ಟೈಮ್ಸ್‌ನ ಒಂದು ಲೇಖನದಿಂದ ರೂ 18.

* ವಿಶ್ವಸಂಸ್ಥೆಯ ವರದಿ ಪ್ರಕಾರ ಹಿಂದೆ ಒಂದು ಟ್ರಾಕ್ಟರ್‌ಗೆ ಎರಡು ಟನ್ ಸಕ್ಕರೆಯ ಬೆಲೆ ಕೊಟ್ಟರೆ ಸಾಕಿತ್ತು. ಈಗ ಏಳು ಟನ್ ಕೊಡಬೇಕು. ಮೂರನೇ ಜಗತ್ತಿಗೆ ವ್ಯಾಪಾರ ಶರತ್ತುಗಳು ಇಷ್ಟೊಂದು ಪ್ರತಿಕೂಲವಾಗಿವೆ.

—ಇಕನಾಮಿಕ್ ಟೈಮ್ಸ್, ಜೂನ್ 18.

* ಕಾಂಗ್ರೆಸ್ ಫೋರಮ್ ಫಾರ್‌ಆ್ಯಕ್ಷನ್‌ನ 10 ಪುಟಗಳ ಟಿಪ್ಪಣಿ ಪಕ್ಷದ ಮುಖಂಡತ್ವದ ವಿರುದ್ಧ ಕಳಂಕಕಾರಿ ತೀರ್ಪು. ಮುಸ್ಲಿಂ ಮಹಿಳಾ ಹಕ್ಕುಗಳ ಪ್ರಶ್ನೆಯಲ್ಲಿ ಇಸ್ಲಾಮೀ ಮೂಲಭೂತವಾದಕ್ಕೆ ಶರಣಾಯಿತು., ರಾಮಜನ್ಮ ಭೂಮಿ— ಬಾಬ್ರಿ ಮಸೀದಿ ವ್ಯವಹಾರದಲ್ಲಿ ಹಿಂದೂ ಮೂಲಭೂತವಾದಿಗಳನ್ನು ಸಂತುಷ್ಟಗೊಳಿಸಿ ಮುಸ್ಲಿಂ ಜನ—ಸಮೂಹಗಳಿಂದ ದೂರವಾಯಿತು ಎಂದಿದೆ. ಕಾಂಗ್ರೆಸ್(ಐ)ನ ಆರ್ಥಿಕ ಧೋರಣೆ ಶ್ರೀಮಂತ—ಪರ, ಬಡಜನವಿರೋಧಿ ಎಂದು ಖಂಡಿಸಿದೆ.......ಫೋರಮ್‌ನ ತೀರ್ಮಾನ ಇತರರಿಗೆ ಹೊಸ ಸಂಗತಿಯೇನಲ್ಲ.

—ಡೆಕ್ಕನ್ ಹೆರಾಲ್ಡ್, ಜೂನ್ 18.

* ವಿದ್ಯಾರ್ಥಿಯ ಬೆಳವಣಿಗೆಗೆ ಉಪಯುಕ್ತವಾಗುವಂತೆ ಕನ್ನಡ ಮಾಧ್ಯಮದ ಶಿಕ್ಷಣಮಟ್ಟ ಉತ್ತಮಗೊಳಿಸಿ ಆಕರ್ಷಕ ಮಾಡುವುದು ಇಂಗ್ಲಿಷ್ ಶಾಲೆಗಳಿಗಾಗಿ ಇರುವ 'ಹುಚ್ಚು' ಬಿಡಿಸಲು ರಚನಾತ್ಮಕ ಮಾರ್ಗೋಪಾಯ.

ಪ್ರಜಾವಾಣಿ ಜೂನ್ 18.

* ಹಿಡುವಳಿಯ ಭದ್ರತೆ ಪಶ್ಚಿಮಬಂಗಾಳದ ಅನುಭವ ತೋರಿಸುವಂತೆ ಆಶ್ಚರ್ಯಜನಕ ಫಲ ನೀಡಬಲ್ಲದು.

—ಟೈಂಸ್ ಆಫ್ ಇಂಡಿಯಾ ಜೂನ್ 19.

ಸರಕಾರಿ ವೆಚ್ಚವನ್ನು ಕಡಿಮೆ ಮಾಡುವುದಕ್ಕಾಗಿ ಉಚ್ಚಾಟಿಸಲು ಅಥವಾ ಕಡ್ಡಾಯ ನಿವೃತ್ತಿಗೊಳಿಸಲು 75000 ನೌಕರರ ಪ್ರಥಮ ಪಟ್ಟಿಯನ್ನು ಬ್ರೆಜಿಲ್ ಸರಕಾರ ಜೂನ್ 16 ರಂದು ಪ್ರಕಟಿಸಿದೆ. ಉಚ್ಚಾಟನೆ, ಖಾಸಗೀಕರಣ ಮತ್ತು ತಮ್ಮ ವೆಚ್ಚ ಮಾಡುವ ಶಕ್ತಿ ಕುಂದುತ್ತಿರುವುದನ್ನು ಪ್ರತಿಭಟಿಸಲು ಬ್ರೆಜಿಲ್ ನೌಕರರು ಮುಷ್ಕರ ಆರಂಭಿಸಿರುವ ಸಂದರ್ಭದಲ್ಲಿ ಸರಕಾರದ ಈ ಕ್ರಮ ಹೊರ ಬಿದ್ದಿದೆ.

— ದಿ ಸ್ಟೇಟ್ಸ್ ನ್ಯೂಸ್, ಜೂನ್ 18

ಎಡರಂಗದ ಎಲ್ಲಾ ಪಾಲುದಾರರು — ಸಿ.ಪಿ.ಐ.(ಎಂ), ಸಿ.ಪಿ.ಐ., ಆರ್.ಎಸ್.ಪಿ. ಮತ್ತು ಫಾರ್ವರ್ಡ್ ಬ್ಲಾಕ್ ಕಾಂಗ್ರೆಸ್(ಐ) ನಿಂದ ಕಿತ್ತುಕೊಂಡು ತಮ್ಮ ಸ್ಥಾನಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವುದು ಈ ಬಾರಿಯ (ಕಲ್ಕತ್ತ ಮುನ್ಸಿಪಲ್ ಕಾರ್ಪೋರೇಶನ್) ಚುನಾವಣೆಯ ಗಮನೀಯ ಲಕ್ಷಣವಾಗಿದೆ.

— ದಿ ಹಿಂದೂಸ್ತಾನ್ ಟೈಮ್ಸ್ ಜೂನ್ 19

ಜೂನ್26 ಚಿಂತಾಮಣಿ ಯಲ್ಲಿ ಎಸ್.ಎಫ್.ಐ. ಎರಡು ದಶಕಗಳ ಮುನ್ನಡೆ ಉದ್ಘಾಟನಾ ಸಮಾರಂಭ

ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಸ್ಥಾಪನೆಗೊಂಡು 20 ವರುಷಗಳಾಗುತ್ತಿರುವ ಹಿನ್ನೆಲೆಯಲ್ಲಿ ವರ್ಷಪೂರ್ತಿ ಆಚರಣೆಯನ್ನು ನಡೆಸಲು ತೀರ್ಮಾನಿಸಲಾಗಿದೆ. ಸಮಾವೇಶ, ಕಿರು ಹೊತ್ತಿಗೆಗಳ ಪ್ರಕಟಣೆ - ಚಳುವಳಿ ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ನಡೆಸಲಾಗುವುದು.

ಈ ಆಚರಣೆಯ ಉದ್ಘಾಟನಾ ಸಮಾರಂಭವನ್ನು ಇದೇ ಜೂನ್ 26 ರಂದು ಕೋಲಾರ ಜಿಲ್ಲೆಯ ಚಿಂತಾಮಣಿಯ 'ಟೌನ್‌ಹಾಲ್‌ನಲ್ಲಿ ಮಧ್ಯಾಹ್ನ 2.00 ಕ್ಕೆ ಆರಂಭಗೊಳ್ಳಲಿದೆ. ಆರಂಭದಲ್ಲಿ ನಗರದ ಗಣ್ಯರು, ಬುದ್ಧಿಜೀವಿಗಳು, ವಿವಿಧ ಸಂಘಟನೆಗಳ ಮುಖಂಡರು ನಾಗರೀಕರನ್ನೊಳಗೊಂಡು 'ಕೋಮು ಸೌಹಾರ್ದತೆಗಾಗಿ ಪಾದಯಾತ್ರೆ' ಇದೆ.

2.30 ಕ್ಕೆ 'ಎಸ್.ಎಫ್.ಐ - ಎರಡು ದಶಕಗಳ ಮುನ್ನಡೆ 'ಉದ್ಘಾಟನಾ ಸಮಾರಂಭ - ಎಸ್.ಎಫ್.ಐ.ನ ಅಖಿಲ ಭಾರತ ಅಧ್ಯಕ್ಷರಾದ ಕಾಂ. ಎ. ವಿಜಯ ರಾಘವನ್ ಉದ್ಘಾಟಿಸಲಿದ್ದಾರೆ.

ಡಾ॥ ಸಿದ್ಧಲಿಂಗಯ್ಯ (MLC) ಖ್ಯಾತ ವಕೀಲರಾದ ಕಾಂ. ಎ. ಗೋಪಾಲಗೌಡ, ಕಾಂ. ಜಿ.ವಿ. ಶ್ರೀ ರಾಮರೆಡ್ಡಿ, ಕಾಂ। ವಿ.ಎನ್. ಹಳಕಟ್ಟಿ, ಕಾಂ। ಎಸ್.ಆರ್. ಆರಾಧ್ಯ, ಕಾಂ। ಆರ್. ಜಯಕುಮಾರ್ ಮುಂತಾದವರು ಭಾಗವಹಿಸಲಿದ್ದಾರೆ. ಹಿಂದಿನ ರಾಜ್ಯ ಸಮಿತಿಯ ಮುಖಂಡರುಗಳಿಗೆ ನೆನಪಿನ ಕಾಣಿಕೆ ನೀಡಲಾಗುವುದು.

ನಂತರ ಜೂನ್ 27 ರಿಂದ ಜುಲೈ 1ರವರೆಗೆ ರಾಜ್ಯ ಮಟ್ಟದ ಅಧ್ಯಯನ ಶಿಬಿರವೂ ಸಹ ಕೋನ ಕುಂಟ್ಲು ಗ್ರಾಮದಲ್ಲಿ ಜರುಗುವುದು.

ಕಾಂ। ಜಿ.ವಿ. ಶ್ರೀ ರಾಮರಾಡ್ಡಿ ಯವರು ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯು ಕಾರ್ಯ ನಿರ್ವಹಿಸುತ್ತಲಿದೆ. ಸಮಾರಂಭಕ್ಕೆ ಸರ್ವರಿಗೂ ಸ್ವಾಗತವನ್ನು ರಾಜ್ಯ ಸಮಿತಿಯು ಕೋರಿದೆ.

ರಾಮದುರ್ಗದಲ್ಲಿ ಸಿಪಿಐ (ಎಂ) ಅಭ್ಯರ್ಥಿ ವಿಜಯ

ಬೆಳಗಾಂ ಜಿಲ್ಲೆಯ ರಾಮದುರ್ಗ ಪುರಸಭೆಗೆ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕಾಂ.ವಿ.ಪಿ. ಕುಲಕರ್ಣಿಯವರು ಅತ್ಯಂತ ಹೆಚ್ಚಿನ ಮತ ಪಡೆದು ಆಯ್ಕೆಯಾಗಿದ್ದಾರೆ.

ಒಬ್ಬ ಸ್ಪರ್ಧಿ ಮೃತನಾದುದರಿಂದ ಮುಂದೂಡಲಾಗಿದ್ದ 4 ಸದಸ್ಯರ ಈ ವಾರ್ಡ್‌ನಲ್ಲಿ ಅತ್ಯಂತ ಹೆಚ್ಚು ಮತಗಳನ್ನು(833) ಪಡೆದು ಜಯಶೀಲರಾಗಿದ್ದಾರೆ.

ಹಿಂದೆ 'ಐಕ್ಯರಂಗ'ಕ್ಕಾಗಿ ವರ್ಷಗಟ್ಟಲೆ ದುಡಿದ ಈ ಸಂಗಾತಿಯನ್ನು 'ಐಕ್ಯರಂಗ" ಅಭಿನಂದಿಸುತ್ತದೆ.

ಕಳೆದ ಸಂಚಿಕೆಯಲ್ಲಿ ಪ್ರಕಟಗೊಂಡ, ಕನಿಷ್ಠ ಕೂಲಿಗಾಗಿ ಧರಣಿ ಎಂಬ ವರದಿಯಲ್ಲಿ ಈ ಕೆಳಕಂಡ ವಾಕ್ಯಗಳ ತಪ್ಪಾಗಿ ವರದಿಯಾಗಿರುವುದರಿಂದ ಅದನ್ನು ಮುಂದೆ ಕಾಣಿಸಿದ ರೀತಿ ಓದಿಕೊಳ್ಳಬೇಕಾಗಿ ವಿನಂತಿ.

ಸರ್ಕಾರವು 1250 ರೂ ಅನ್ನು ಕನಿಷ್ಠ ಕೂಲಿಯಾಗಿ ನಿಗದಿಪಡಿಸಿದೆ ಎಂದಿದೆ. ಅದರೆ, 1250 ರೂ ಕನಿಷ್ಠ ಕೂಲಿಯಾಗಿ ನಿಗದಿ ಪಡಿಸಬೇಕೆಂದು ಸರ್ಕಾರವನ್ನು ಬೆಂಗಳೂರು ಜಿಲ್ಲಾ ಹೋಟೇಲ್ ಕಾರ್ಮಿಕರ ಸಂಘವು ಒತ್ತಾಯಿಸಿದೆ.

"ಕಮ್ಯುನಿಸ್ಟ್ ಚಳುವಳಿ ನನ್ನನ್ನು ಸೆಳೆದ ಬಗೆ'

ಈಗಾಗಲೇ ಪ್ರಕಟಿಸಿರುವಂತೆ ಈ ಅಂಕಣ ಮುಂದಿನ ವಾರದಿಂದ ಆರಂಭವಾಗಲಿದೆ. ರಾಜ್ಯದ ಹಿರಿಯ ಕಮ್ಯುನಿಸ್ಟ್ ಮುಂದಾಳು ಕಾಂ. ಎನ್.ಕೆ. ಉಪಾಧ್ಯಾಯರು ತಾನು ಹೇಗೆ ಕಮ್ಯುನಿಸ್ಟ್ ಚಳುವಳಿಯತ್ತ ಆಕರ್ಷಿತನಾದೆ ಎಂದು ನೆನಪಿಸಿಕೊಳ್ಳುವ ಮೂಲಕ ಈ ಅಂಕಣವನ್ನು ಜುಲೈ 1 ರ ಸಂಚಿಕೆಯಲ್ಲಿ ಉದ್ಘಾಟಿಸುತ್ತಾರೆ.

ಸಂಗಾತಿಗಳೇ ನೀವೂ ಕಮ್ಯುನಿಸ್ಟ್ ಚಳುವಳಿಗೆ ಬಂದ ಬಗ್ಗೆ 'ಐಕ್ಯರಂಗ' ಕ್ಕೆ ಬರೆಯಿರಿ. ನಿಮ್ಮ ಫೋಟೋ ಕಳಿಸಿದರೆ ಅದನ್ನೂ ಪ್ರಕಟಿಸಲಾಗುವುದು. ತ್ವರೆ ಮಾಡಿ.

ಇದೀಗ ಪ್ರಕಟವಾಗಿದೆ



ಸಿ.ಪಿ.ಐ.(ಎಂ) ಕೇಂದ್ರ ಸಮಿತಿ ಅಂಗೀಕರಿಸಿದ ರಾಜಕೀಯ— ಸೈದ್ಧಾಂತಿಕ ವಿಶ್ಲೇಷಣೆ
ಬೆಲೆ ರೂ. 3—00
ಪ್ರಕಟಣೆ: ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿ. ಬೆಂಗಳೂರು

Printed and Published by P. Ramachandra Rao. on behalf of Communist Party of India (Marxist) Karnataka State Committee, L-56, K.V. Temple Street, Sultanpet, Bangalore - 560 053; Editor: P. RAMACHA...